ಶ್ರೀ ವಾಟಾಳ್ ನಾಗರಾಜ್: ಇದು ಆ ಸಭೆಗೆ ಗೌರವವಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಏನಾಗುತ್ತಿದೆ?

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಇದರಿಂದ ಸದನದ ಗಾಂಭೀರ್ಯ ಹೋಗುತ್ತಿದೆ.

ಅಧ್ಯಕ್ಷರು: ದಯಮಾಡಿ ಕೇಳಿ. ದಯಮಾಡಿ ಕೇಳಿ. ಒಬ್ಬರು ex-MLA ತೀರಿಕೊಂಡರೆಂಬ ವರ್ತಮಾನ ಬಂತು. ಅದರ ಬಗ್ಗೆ ಎಲ್ಲಾ ತಯಾರು ಮಾಡುತ್ತಿದ್ದೆವು. Adjournment motion ಬಗ್ಗೆ ನೋಡುತ್ತಿದ್ದೆ. ಅದರಿಂದ ಕೆಲವು ಸಾರಿ ಸ್ವಲ್ಪ ತಡವಾಗುತ್ತದೆ. ಅದಕ್ಕೋಸ್ಕರ ದಯಮಾಡಿ ಸಹಕರಿಸಬೇಕು.

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ: ಇದು ಒಳ್ಳೆಯದಲ್ಲ. Problem ಏನು? ಸದಸ್ಯರಾಗಿ ನಮಗೆ ಗೊತ್ತಾಗಬೇಕಲ್ಲಾ?

(ಅಡಚಣೆ)

ಅಧ್ಯಕ್ಷರು: ದಯಮಾಡಿ, ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ತಾವು ಏನಾದರೊಂದು ಹೇಳಿ ಸಾರ್? ಸತ್ಯಾಂಶ ಹೇಳಿ? ಏನಾಗಿದೆ ಎಂದು ಸದನಕ್ಕೆ ತಾವು ದಯವಿಟ್ಟು ಹೇಳಿ? ಸಭೆಯು ಬಹಳ ದೊಡ್ಡದು. ಎಲ್ಲರಿಗಿಂತಲೂ ಈ ಸಭೆ ಬಹಳ ದೊಡ್ಡದು. ಏನು ನಡೆಯುತ್ತಿದೆ ಎನ್ನುವುದನ್ನು ಈ ಸಭೆಗೆ ಹೇಳಬೇಕು.

ಅಧ್ಯಕ್ಷರು: ಏನೂ ನಡೆಯುತ್ತಿಲ್ಲ. ಕೇಳಿ ದಯಮಾಡಿ. ಒಬ್ಬರು ಮಾಜಿ ಶಾಸಕರು ತೀರಿಕೊಂಡರೆಂಬ ವರ್ತಮಾನ ಬಂತು. ಅದನ್ನು ರೆಡಿ ಮಾಡುತ್ತಿದ್ದೆವು. ಸ್ವಲ್ಪ ಕಾಲವಾಯಿತು. ಆಮೇಲೆ, ಇದನ್ನು examine ಮಾಡಬೇಕಾಗಿತ್ತು. ನೋಡಬೇಕಾಗಿತ್ತು, ಆ ಕಾರಣದಿಂದ ಸ್ವಲ್ಪ ತಡವಾಗಿದೆ. ದಯಮಾಡಿ, ಸಹಕರಿಸಬೇಕು.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಈ ಸದನಕ್ಕೆ ಇತಿಹಾಸವಿದೆ.

ಅಧ್ಯಕ್ಷರು: ದಯಮಾಡಿ ಸಹಕರಿಸಬೇಕು. ಇನ್ನೇನಿದೆ ಇದರಲ್ಲಿ?

ಶ್ರೀ ವಾಟಾಳ್ ನಾಗರಾಜ್: ಆ ಶಕ್ತಿ ಕುಂದಬಾರದು ಎಂದು ನಾವು ಹೇಳುವುದು.

2. ಸಂತಾಪ ಸೂಚನೆ

ವಿಷಯ: ಮಾಜಿ ಸದಸ್ಯರಾದ ಶ್ರೀ ಎಸ್. ರಮೇಶ ಹಾಗೂ ದೂದ್ಯಾ ನಾಯ್ಕ ರವರುಗಳ ನಿಧನದ ಬಗ್ಗೆ.

ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್. ರಮೇಶ್ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ದೂದ್ಯಾ

ನಾಯ್ಕ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಎಸ್. ರಮೇಶ್

ಶ್ರೀ ರಮೇಶ್ ಅವರು 1954ನೇ ಮಾರ್ಚ್ 30ರಂದು ಜನಿಸಿದ್ದು, ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದರು. ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕರ್ನಾಟಕ ಕೊಳಚೆ ನಿವಾಸಿಗಳ ಸಂಘ, ನಾಗರೀಕ ಕ್ರಿಯಾ ಸಮಿತಿ ಹಾಗೂ ಹಲವಾರು ಕಾರ್ಮಿಕ ಸಂಘಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಒಂಬತ್ತನೇ ವಿಧಾನಸಭೆಗೆ ಉತ್ತರಹಳ್ಳಿ ಕ್ಷೇತ್ರದಿಂದ ಆಯ್ಕೆಯಾಗಿ ಯುವಜನ ಸೇವೆ, ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 07.07.2006ರಂದು ನಿಧನ ಹೊಂದಿದರು.

2. ಶ್ರೀ ದೂದ್ಯಾ ನಾಯ್ಕ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎ.ಎಸ್. ದೂದ್ಯಾ ನಾಯ್ಕ ಅವರು 1932ನೇ ಜನವರಿ 13ರಂದು ಶಿವಮೊಗ್ಗದಲ್ಲಿ ಜನಿಸಿದ್ದು, ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದರು. ತಾಲ್ಲೂಕು ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿ, ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಖಜಾಂಚಿಗಳಾಗಿ ಹಾಗೂ ಪಾನ ನಿರೋಧದ ಬಗ್ಗೆ ಹೋರಾಟ ನಡೆಸಿದ್ದ ಶ್ರೀಯುತರು 1957ರಲ್ಲಿ ಹೊನ್ನಾಳಿ ಕ್ಷೇತ್ರದಿಂದ ಎರಡನೇ ಮೈಸೂರು ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ: 07.07.2006ರಂದು ನಿಧನ ಹೊಂದಿದರು.

ಶ್ರೀ ಎಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಮಾಜಿ ಸಚಿವರು, ಉತ್ತರಹಳ್ಳಿ ಕ್ಷೇತ್ರದ ಮಾಜಿ ಶಾಸಕರು ಆಗಿದ್ದಂಥ ಶ್ರೀ ಎಸ್. ರಮೇಶ್‌ರವರ ನಿಧನವು ನನಗೆ ವೈಯಕ್ತಿಕವಾಗಿ ಒಂದು ತುಂಬಲಾರದ ನಷ್ಟವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಒಂದು ರಾಜಕೀಯ ಹೋರಾಟದಲ್ಲಿ ಶಾಸಕರಾಗಿ ಬೆಂಗಳೂರು ನಗರದಲ್ಲಿ ಪ್ರಮುಖವಾಗಿ ಅತ್ಯಂತ ತುಳಿತಕ್ಕೊಳಗಾದಂಥ ಶೋಷಿತ ವರ್ಗಗಳ ಬಗ್ಗೆ ಒಂದು ಸಂಘಟನೆಯನ್ನು ಮಾಡತಕ್ಕಂಥದ್ದರಲ್ಲಿ ಅದರಲ್ಲಿಯೂ ಪ್ರಮುಖವಾಗಿ ಕೊಳಚೆ ನಿವಾಸಿಗಳ ಒಂದು ರಕ್ಷಣೆಯನ್ನು ಮಾಡತಕ್ಕಂಥ ವಿಷಯದಲ್ಲಿಯೂ ಅವರಿಗೆ ಇದ್ದಂತಹ ಕಾಳಜಿಯನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳಬಯಸುತ್ತೇನೆ. ಅದೇ ರೀತಿ ಚಲನಚಿತ್ರರಂಗದಲ್ಲಿಯೂ ಅವರದೇ ಆದಂಥ ಒಂದು ಪ್ರಮುಖವಾದ ಪಾತ್ರವನ್ನು ನಿರ್ವಹಿಸಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹಾಗೆಯೇ ಯುವ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳಲ್ಲಿ,

ಸಂಘಟನೆಗಳಲ್ಲಿ ಅವರು ತೊಡಗಿಸಿಕೊಂಡಿದ್ದ ಸೇವೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಇವತ್ತು ಅವರ ನಿಧನದಿಂದ ಉಂಟಾಗಿರುವ ದುಃಖದಿಂದ ಅವರ ಕುಟುಂಬ ವರ್ಗ ಹೊರಗೆ ಬರತಕ್ಕಂಥ ಶಕ್ತಿಯನ್ನು ದೇವರು ಕೊಡಲಿ ಎಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸಿ, ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ನಾನು ಭಗವಂತನಲ್ಲಿ ಈ ಸಂದರ್ಭದಲ್ಲಿ ಕೋರುತ್ತೇನೆ.

ಇವತ್ತು ಶ್ರೀ ಎ.ಎಸ್. ದೂದ್ಯನಾಯ್ಕರವರು ಹಿಂದುಳಿದ ವರ್ಗದಿಂದ ಬಂದಂತಹವರು. ಶಿವಮೊಗ್ಗ ಜಿಲ್ಲೆಯವರಾಗಿದ್ದು ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಅವರ ಒಂದು ನಿಧನಕ್ಕೂ ನಾನು ಈ ಸಂದರ್ಭದಲ್ಲಿ ಸಂತಾಪವನ್ನು ಸೂಚಿಸುತ್ತಾ ಇವತ್ತು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಈ ಒಂದು ಸಂದರ್ಭದಲ್ಲಿ ನನ್ನ ಭಾವನೆಯನ್ನು ವ್ಯಕ್ತಪಡಿಸಬಯಸುತ್ತೇನೆ.

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಎಸ್. ರಮೇಶ್ ಮತ್ತು ಶ್ರೀ ಎ.ಎಸ್. ದೂದ್ಯ ನಾಯಕರ ಬಗ್ಗೆ ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ. ಸಭಾ ನಾಯಕರೂ ಕೂಡ ಅವರ ಬಗ್ಗೆ ಮಾತನಾಡಿದ್ದಾರೆ. ಎಸ್. ರಮೇಶ್‌ರವರು ಮಾಜಿ ಮಂತ್ರಿಗಳಾಗಿ ಕಾಂಗ್ರೆಸ್ ಪಕ್ಷದ, ಅದರಲ್ಲಿಯೂ ವಿಶೇಷವಾಗಿ ಯುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ತನ್ನದೇ ಒಂದು ಛಾಪನ್ನು ಕಾಂಗ್ರೆಸ್ ಪಕ್ಷ ಹಾಗೂ ವಿಶೇಷವಾಗಿ ಸಾರ್ವಜನಿಕರ, ಅದರಲ್ಲಿಯೂ ಕೂಡ ಸಾಮಾನ್ಯ ಜನರ ಮನಸ್ಸಿನಲ್ಲಿ ಬಹಳಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಉತ್ತರಹಳ್ಳಿಯ ಮತಕ್ಷೇತ್ರದಿಂದ ಆರಿಸಿ ಬರುವುದು ಬಹಳ ಕಷ್ಟ. ಏಕೆಂದರೆ ಅಲ್ಲಿ 11.00 ಲಕ್ಷ ಮತದಾರರಿದ್ದಾರೆ. ಅವರು ಅಲ್ಲಿಂದ ಆರಿಸಿ ಬಂದರು. ವಿಶೇಷವಾಗಿ ಕೊಳಚೆ ನಿವಾಸಿ ಪ್ರದೇಶಗಳಿಗೆ ಅತ್ಯುತ್ತಮವಾದ ಕೆಲಸವನ್ನು ಮಾಡಿದ್ದರು. ಹಾಗಾಗಿ ಅವರಿಗೆ Slum Ramesh ಎಂಬ ಬಿರುದು ಕೂಡ ಅವರಿಗಿತ್ತು. ರಾಜೀವ್ ಗಾಂಧಿಯವರು ದೇಶದ ಪ್ರಧಾನ ಮಂತ್ರಿಯಾದಾಗ, ಅವರು ಬಹಳ ಸಮೀಪವಾಗಿ ಮತ್ತು ಯುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಬಹಳಷ್ಟು ಪರಿಣಾಮಕಾರಿಯಾದ ಕೆಲಸಗಳನ್ನು ಮಾಡಿದ್ದಾರೆ. ಅವರು ಬಹಳ ಸಂಘರ್ಷಮಯವಾದಂಥ ಜೀವನ ಸಾಗಿಸಿದ್ದಾರೆ. ಅವರ ತಂದೆಯವರೂ ಕೂಡ ಒಬ್ಬ employee ಆಗಿದ್ದರು, ಅಂಥವರ ಹೊಟ್ಟೆಯಲ್ಲಿ ಹುಟ್ಟಿ ರಮೇಶ್‌ರವರು ಒಬ್ಬ ಕಾರ್ಮಿಕ ನಾಯಕನಾಗಿ ತಮ್ಮದೇ ಆದಂಥ ವ್ಯಕ್ತಿತ್ವ ಹೊಂದಿದ್ದರು. ಕೆಲವು ಸಂದರ್ಭಗಳಲ್ಲಿ ಕೆಲವು ಜನ ತೀರಿ ಹೋಗುತ್ತಾರೆ. ಕೆಲವು ಜನರು ವ್ಯಕ್ತಿಗಳಾಗಿ ಉಳಿಯುತ್ತಾರೆ. ಅವರು ನಿಧನರಾದ ಮೇಲೆ ನಾನಾಗಲಿ ಖರ್ಗೆಯವರಾಗಲಿ ಎಲ್ಲಾ ನಾಯಕರು ಹೋಗಿ ಬಂದೆವು. ಅಲ್ಲಿ ಒಂದು ಸುದ್ದಿ ಬಂದ ತಕ್ಷಣ ಎಲ್ಲಾ ಜನರು ಹೇಗಾಯಿತು ಎಂದು ಕೇಳುತ್ತಿದ್ದರು. ಏಕೆಂದರೆ ಎರಡು ದಿವಸಗಳ ಹಿಂದೆ ರಮೇಶ್‌ರವರು ನಮ್ಮ ಮನೆಗೆ ಬಂದಿದ್ದಾಗ ಅವರೊಂದಿಗೆ ನಾನು

ಮಾತನಾಡಿದ್ದೆ. ಅದಾದ ನಂತರ ನಿನ್ನೆ 9.30 ಗಂಟೆಗೆ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಹರಿಶ್ಚಂದ್ರಘಾಟ್‌ಗೆ ಹೋಗಿದ್ದೆ. ನಮ್ಮ ಷರೀಫ್‌ರವರೂ ಕೂಡ ಇದ್ದರು, ಸಚಿವರಾದ ಜಮೀರ್ ಅಹ್ಮದ್ ಕೂಡ ಇದ್ದರು, ನಜೀರ್ ಅಹ್ಮದ್ ಎಂ.ಎಲ್.ಸಿ., ನೆ.ಲ. ನರೇಂದ್ರ ಬಾಬುರವರು ಇದ್ದರು. ಎಲ್ಲಾ ಕಾರ್ಮಿಕ ವರ್ಗದ ಜನರು ದುಃಖಿಸುತ್ತಿದ್ದರು, ಏಕೆಂದರೆ ಅಧಿಕಾರದಿಂದ ದೂರವಾದ ಮೇಲೆ ಅವರು 10–12 ವರ್ಷಗಳಿಂದ ಮಂತ್ರಿಯಾಗಿ ಇವತ್ತೇನೂ ಅಧಿಕಾರದಲ್ಲಿರಲಿಲ್ಲ. ಆದರೂ ಕೂಡ ಸಾಮಾನ್ಯ ಜನರು ರಾತ್ರಿ ಒಂಬತ್ತೂವರೆ ಗಂಟೆಯಲ್ಲಿ ಆ ಹರಿಶ್ಚಂದ್ರಘಾಟ್‌ನಲ್ಲಿ ಬಂದು ಅಳುತ್ತಿದ್ದರು. ಎಂತಹ ಒಬ್ಬ ನಾಯಕರು ತೀರಿಹೋಗಿದ್ದಾರೆ, ನಮ್ಮ ಬಗ್ಗೆ ವಿಚಾರ ಮಾಡತಕ್ಕಂಥ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆಂದು ವಿಚಾರ ಮಾಡುತ್ತಿದ್ದರು. ಅದು ಬಹಳ ಮುಖ್ಯವಾದುದು. ರಮೇಶ್‌ರವರು ನಮಗಾಗಲಿ ಖರ್ಗೆಯವರಿಗಾಗಲಿ ಮತ್ತೆ ನಮ್ಮ ದೇಶಪಾಂಡೆಯವರಿಗೆ, ರಮೇಶ್‌ಕುಮಾರ್‌ರವರಿಗೆ, ದಿನೇಶ್ ಗುಂಡೂರಾವ್‌ರವರಿಗೆ ಮತ್ತು ಎಲ್ಲರಿಗೂ ಸಮೀಪದ ವ್ಯಕ್ತಿಯಾಗಿದ್ದರು, ಇವತ್ತು ಅವರನ್ನು ಕಳೆದುಕೊಂಡಿದ್ದೇವೆ. ವಿಶೇಷವಾಗಿ ಕಾಂಗ್ರೆಸ್ ಪಕ್ಷದ philosophy ಏನಿದೆ, ಬಡವರಿಗೆ ಶೋಷಿತ ವರ್ಗಕ್ಕೆ ತಾವು ಹೇಳಿದ ಪ್ರಕಾರ ರಕ್ಷಣೆ ಕೊಡತಕ್ಕಂಥ ಕೆಲಸವನ್ನು 1968 ಆದ ಮೇಲೆ ಕರ್ನಾಟಕ ರಾಜ್ಯದಲ್ಲಿ ಬಹಳಷ್ಟು ಕೂಡ ಪರಿಣಾಮಕಾರಿಯಾಗಿ ಮಾಡಿದ್ದಾರೆ. ಅಂತಹ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡು ಇವತ್ತು ನಿಜವಾಗಿಯೂ ಕೂಡ ನಮ್ಮ ರಾಜ್ಯಕ್ಕೆ ವಿಶೇಷವಾಗಿ ನಮ್ಮ ಪಕ್ಷಕ್ಕೆ ಅತೀವ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಎ.ಎಸ್. ದೂದ್ಯನಾಯ್ಕರವರೂ ಕೂಡ ಸ್ವಾತಂತ್ರ್ಯ ಹೋರಾಟಗಾರರು, ಅವರು ಎರಡು ಸಾರಿ ಅಲ್ಲಿ ಆರಿಸಿ ಬಂದಿದ್ದಾರೆ. ಅವರೂ ಕೂಡ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಹಾಗಾಗಿ ಶ್ರೀ ದೂದ್ಯನಾಯ್ಕರವರ ಮನೆಯವರಿಗೆ ಮತ್ತು ವಿಶೇಷವಾಗಿ ರಮೇಶ್‌ರವರ ಮನೆಯವರಿಗೆ ಈ ದುಃಖವನ್ನು ಭರಿಸಲಿಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ, ಏಕೆಂದರೆ ಅವರು 52ನೇ ವಯಸ್ಸಿನಲ್ಲಿ ತೀರಿಹೋಗಿದ್ದಾರೆ, ಇದು ಬಹಳ ಕಷ್ಟದ ಕೆಲಸ, ಅದಕ್ಕಾಗಿ ಅವರ ಕುಟುಂಬಕ್ಕೆ ಈ ನಷ್ಟವನ್ನು ಭರಿಸುವ ಶಕ್ತಿಯನ್ನು ಕೊಡಲಿ, ಅದೇ ರೀತಿಯಾಗಿ ಶ್ರೀ ದೂದ್ಯನಾಯ್ಕರವರ ಮನೆಯವರಿಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ (ಗುರುಮಿಠಕಲ್): ಸನ್ಮಾನ್ಯ ಅಧ್ಯಕ್ಷರೇ, ತಾವೇನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಸಂಪೂರ್ಣವಾದಂಥ ಬೆಂಬಲವನ್ನು ನೀಡುತ್ತಾ, ಇವತ್ತು ಎಸ್. ರಮೇಶ್‌ರವರು ನಮ್ಮ ಮಧ್ಯದಲ್ಲಿಲ್ಲ. ಅವರು 52ನೇ ವಯಸ್ಸಿಗೆ ನಮ್ಮಿಂದ ಅಗಲಿ ಹೋಗಿದ್ದಾರೆ. ಇದು pre-mature

death ಬಹುಶಃ ಇದು ಸಾಯತಕ್ಕಂಥ ವಯಸ್ಸಲ್ಲ. ಆದರೆ ಅವರು ದೈವಾಧೀನರಾಗಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ, ಅವರು ವಿಶೇಷವಾಗಿ ಬಡವರಿಗಾಗಿ ಹೆಚ್ಚಿನ ರೀತಿಯಾಗಿ ಕೆಲಸ ಮಾಡಲಿಕ್ಕೆ ಆಸಕ್ತಿಯನ್ನು ಹೊಂದಿದ್ದರು ಮತ್ತು slumನಲ್ಲಿ ಹೆಚ್ಚಾಗಿ ಕೆಲಸ ಮಾಡಿ ಹೆಚ್ಚು ಕಡಿಮೆ ಅವರಿಗೆ Slum Ramesh ಎಂದು surname ಇತ್ತು. ಅದೇ ರೀತಿಯಾಗಿ Trade Union activities ನಲ್ಲಿಯೂ ಭಾಗವಹಿಸತಕ್ಕಂಥ ಕೆಲಸ ಒಳ್ಳೆಯ ರೀತಿಯಿಂದ ಮಾಡುತ್ತಿದ್ದರು. ಜೊತೆಯಲ್ಲಿ friendship ಗೋಸ್ಕರ ಅವರು ಅವರಿಗೆ ತೊಂದರೆಯಾದರೂ ಅನೇಕ ಸಾರಿ ಆ ಒಂದು friendship ಬಿಡುತ್ತಿರಲಿಲ್ಲ ಮತ್ತು ಕಷ್ಟದಲ್ಲಿರುವವರಿಗೆ ಸಹಾಯವನ್ನು ಮಾಡತಕ್ಕಂಥ ಒಬ್ಬ ವ್ಯಕ್ತಿಯಾಗಿದ್ದರು, ಅನೇಕ ಸಾರಿ ಪಕ್ಷ ಪಂಗಡವನ್ನು ನೋಡದೆಯೂ ಸಹ friendship ಗೋಸ್ಕರ ಹೊಂದಾಣಿಕೆ ಮಾಡತಕಂಥದ್ದು ನಮ್ಮ ಗಮನಕ್ಕೂ ಕೂಡ ಬಂದಿದೆ. ಅದೂ ಅಲ್ಲದೆಯೇ ಬಹುಶಃ ನಮ್ಮ ಪಕ್ಷದಿಂದ, ಉತ್ತರ ಹಳ್ಳಿಯ ಕ್ಷೇತ್ರದಿಂದ ಗೆದ್ದು ಬಂದಂಥ ಏಕೈಕ ವ್ಯಕ್ತಿಯೂ ಕೂಡ ಆಗಿದ್ದರು, ಅದು ಆದಮೇಲೆ ಹೆಚ್ಚು ಕಡಿಮೆ ಕಾಂಗ್ರೆಸ್ ಪಕ್ಷ ನಮ್ಮ ಕೈಬಿಟ್ಟು ಹೋಗಿತ್ತು. ಒಂದು ಕಡೆ ರಾಜಕೀಯದಲ್ಲಿ, ಇನ್ನೊಂದು ಕಡೆ ಸಣ್ಣ ಪುಟ್ಟ ಜನರೊಂದಿಗಿದ್ದು ಅಭಿವೃದ್ಧಿ ಕೆಲಸದಲ್ಲಿ ತೊಡಗಿದ್ದರು, ಮತ್ತೊಂದು ಕಡೆ Trade Union ನಲ್ಲಿ ಕೆಲಸ ಮಾಡಿದ್ದರು, ಇದಲ್ಲದೆಯೇ Film ನಲ್ಲಿಯೂ ಕೂಡ Film Chamber of Commerce ಅಧ್ಯಕ್ಷರಾಗಿ ಅವರು ಚುನಾಯಿತರಾದರು, ಅದೂ ಒಂದು ದೊಡ್ಡ ಹೋರಾಟದಲ್ಲಿ ಆ ಮಂಡಳಿಗೆ ಅಧ್ಯಕ್ಷರಾದರು, ಅದೂ ಸಹ ಒಂದು ದೊಡ್ಡ achievement. ಅದು ಏಕೆಂದರೆ ಅಷ್ಟೊಂದು ಬೇರೆಯವರ ಪ್ರೀತಿಯನ್ನೂ ಕೂಡ ಸಂಪಾದನೆ ಮಾಡತಕ್ಕಂಥವರಾಗಿದ್ದರು. ಹೀಗೆ ವಿವಿಧ ಹಾಗೂ multi-faced personality ಅಂತಹ ಒಬ್ಬ ವ್ಯಕ್ತಿ ನಮ್ಮಿಂದ ಅಗಲಿ ಹೋಗಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಒಂದು ತುಂಬಲಾರದಂಥ ನಷ್ಟವಾಗಿದೆ. ಜೊತೆಯಲ್ಲಿ ಒಬ್ಬ ಗೆಳೆಯರಾಗಿದ್ದ ಅವರನ್ನು ನಾವೆಲ್ಲರೂ ಕೂಡ ಕಳೆದುಕೊಂಡಂಥ ಒಂದು ಸಂದರ್ಭ ಇದಾಗಿದೆ. ಇದರಿಂದ ಅವರ ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ. ಹಾಗಾಗಿ ಅವರ ಕುಟುಂಬಕ್ಕೆ ರಮೇಶ್‌ರವರ ನಿಧನದಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನೂ ಸಹ ದೇವರು ಕೊಡಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಅಧ್ಯಕ್ಷರೇ, ಏನು ಇವತ್ತು ಸನ್ಮಾನ್ಯ ಎಸ್. ರಮೇಶ್‌ರವರಿಗೆ ಮತ್ತು ದೂದ್ಯಾನಾಯ್ಕರವರಿಗೆ ಸಂತಾಪ ಸೂಚನೆ ನಿರ್ಣಯ ತಂದಿದ್ದೀರಿ, ಅದನ್ನು ನಾನೂ ಕೂಡ ತಮ್ಮ ಪರವಾಗಿ ಒಪ್ಪಿಕೊಳ್ಳುತ್ತಾ ಈ ಇಬ್ಬರು ಮಾಜಿ ಶಾಸಕರುಗಳ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ

ಕುಟುಂಬದವರಿಗೆ ಆ ದುಃಖವನ್ನು ಭರಿಸತಕ್ಕ ಶಕ್ತಿ ಬರಲಿ ಎಂದು ಹೇಳಿ ನನ್ನ ಪಕ್ಷದ ಪರವಾಗಿ ಮಾತನಾಡುತ್ತೇನೆ. ಸನ್ಮಾನ್ಯ ಎಸ್. ರಮೇಶ್‌ರವರು ಈ ಶಾಸನ ಸಭೆಯಲ್ಲಿದ್ದಾಗ ನಾನೂ ಕೂಡ ಈ ಶಾಸನ ಸಭೆಯ ಸದಸ್ಯನಾಗಿದ್ದೆ. ಮಾನ್ಯ ಖರ್ಗೆಯವರು ಹೇಳಿದ ಹಾಗೆ ಅವರು ಬಹಳ ಸ್ನೇಹಜೀವಿ. ನಮ್ಮ ತುಮಕೂರು ಜಿಲ್ಲೆಗೆ ಅವರು ಸ್ವಲ್ಪ ಕಾಲ ಉಸ್ತುವಾರಿ ಸಚಿವರಾಗಿ ಕೂಡ ಕೆಲಸ ಮಾಡಿದ್ದರು. ಈ ಕೆಲಸ ಮಾಡುವ ಕಾಲದಲ್ಲಿ ನಾವು ಅವರನ್ನು ಬಹಳ ಹತ್ತಿರದಿಂದ ನೋಡಿದ್ದೆವು. ಪಕ್ಷಭೇದ ಇಟ್ಟುಕೊಳ್ಳದೆ ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವಂಥ ಒಂದು ಶಕ್ತಿ ಅವರಿಗೆ ಇತ್ತು. ರಮೇಶ್‌ರವರು ಇನ್ನೂ ಉದ್ದ ಬೆಳೆಯುತ್ತಾರೆಂದು ನಾವೆಲ್ಲಾ ಭಾವಿಸಿಕೊಂಡಿದ್ದೆವು. ಅಕಸ್ಮಾತ್ತಾಗಿ, ರಾಜಕೀಯದಲ್ಲಿ ಏರುಪೇರುಗಳು ಇದ್ದೇ ಇರುತ್ತೆ. ಅವರ ಅಂತ್ಯ ಹೀಗಾಗಿದೆ ಎಂದು ಹೇಳುತ್ತಾ, ಅವರು ಈ ರಾಜ್ಯದ ಮಂತ್ರಿಯಾಗಿ, ಅದರಲ್ಲೂ ನಮ್ಮ ಉಸ್ತುವಾರಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಾನೇಕೆ ವಿಶೇಷವಾಗಿ ನೆನಪಿಸಿಕೊಳ್ಳುತ್ತೇನೆಂದರೆ, ನನ್ನ ಕ್ಷೇತ್ರದಲ್ಲಿ ಒಂದು ರಿಸೀವಿಂಗ್ ಸ್ಟೇಷನ್ ಹಾಕುವ ದಿವಸ, ನಾನು ಅವರು ಹಾಗೂ ಸನ್ಮಾನ್ಯ ಎಸ್. ಬಂಗಾರಪ್ಪನವರು ಜೊತೆಯಲ್ಲಿ ಇದ್ದೆವು. ಆಗಲೇ ಆದಂಥ ಕಾರ್ಯಕ್ರಮ ಅವತ್ತು ನನ್ನ ಕ್ಷೇತ್ರಕ್ಕೆ ಆಗಿತ್ತು ಅಧ್ಯಕ್ಷರೇ. ಆದ್ದರಿಂದ, ಅವರನ್ನು ಸ್ಮರಣೆ ಮಾಡಿಕೊಳ್ಳುವುದು ನನ್ನ ಕೆಲಸವೆಂದು ಭಾವಿಸಿ, ಅವರ ಆತ್ಮಕ್ಕೆ ಮತ್ತೊಮ್ಮೆ ಶಾಂತಿ ಬಯಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಎಸ್. ರಮೇಶ್‌ರವರ ನಿಧನ ಇಷ್ಟು ಬೇಗ ಆಗುತ್ತೆಂದು ಹೇಳಿ, ನಾವು ಯಾರೂ ಕಂಡಿರಲಿಲ್ಲ. ನನಗೆ ಅತ್ಯಂತ ಆತ್ಮೀಯ ಸ್ನೇಹಿತರು. ಅನೇಕ ಸಂದರ್ಭದಲ್ಲಿ ಮತ್ತು ಅವರು ನನಗೆ ಸಿಕ್ಕಿದಾಗಲೆಲ್ಲಾ ನಾನು ಹೇಳುತ್ತಿದ್ದೆ. ನೀವು, ನಿಮ್ಮ ಆರೋಗ್ಯದ ಕಡೆ ಗಮನ ಕೊಡುತ್ತಾ ಇಲ್ಲ. ಸಿಕ್ಕಾಪಟ್ಟೆ ಶರೀರವನ್ನು ಬೆಳೆಸುತ್ತಾ ಇದ್ದೀರಿ ಎಂದು ಅನೇಕಸಾರಿ ಹೇಳಿದರೂ, ಅವರು ಆ ಕಡೆ ಸರಿಯಾದ ರೀತಿಯಲ್ಲಿ ಲಕ್ಷ್ಯ ಕೊಡಲಿಲ್ಲ. ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ, ಅದೇ ಕಾಲದಲ್ಲಿ ಮೈಸೂರು ದಸರಾ ಹಬ್ಬಕ್ಕೂ ಅವರು ಸಚಿವರಾಗಿದ್ದರು. ಅದೂ ಕೂಡ ಅವರಿಗೆ ಸೇರಿತ್ತು. ಎಷ್ಟು ಚೆನ್ನಾಗಿ ಅವರು ಒಂದು ಆದರ್ಶವಾಗಿ ನಡೆಸಿ, ಒಂದು ಹೊಸ ದಿಕ್ಕನ್ನೇ ತಂದರು. ಒಂದು ವಿಚಾರವನ್ನು ತಮಗೆ ಹೇಳುತ್ತೇನೆ. ಮೈಸೂರು ದಸರಾ ಬರೀ ಮೈಸೂರಿನವರಿಗೇ ಅಲ್ಲ, ಇಡೀ ದೇಶ ವಿದೇಶಕ್ಕೂ ಬೇಕು, ಇದರ ಜೊತೆಗೆ ವಿಧಾನಸೌಧದ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಪಕ್ಷಗಳ ಮುಖಂಡರುಗಳು ಮತ್ತು ಸದನದ ಮುಖಂಡರುಗಳು ಅಲ್ಲಿ ಭಾಗವಹಿಸಬೇಕೆಂದು ಪ್ರತಿ ಆಹ್ವಾನ ಪತ್ರಿಕೆಯಲ್ಲಿ ಎಲ್ಲರ ಹೆಸರುಗಳನ್ನೂ ಹಾಕಿಸಿ,

ಅಲ್ಲಿ ಅವರು ಇಳಿದುಕೊಳ್ಳುವುದಕ್ಕೆ, ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದರು. ವಿಶೇಷವಾಗಿ ದಸರಾ ಹಬ್ಬವನ್ನು ಪಕ್ಷಾತೀತವಾಗಿ ನಡೆಸಿ, ಒಂದು ಹೊಸ ದಿಕ್ಕಿಗೆ ತೆಗೆದುಕೊಂಡು ಹೋದಂಥ ಒಬ್ಬ ವ್ಯಕ್ತಿ. ಬಹುಶಃ ಅವರಿಗೆ ಎಲ್ಲಾ ಪಕ್ಷದಲ್ಲೂ ಸ್ನೇಹಿತರು ಇದ್ದರು. ಎಲ್ಲರ ಜೊತೆಯಲ್ಲೂ ಬಹಳ ಪ್ರೀತಿಯಿಂದ, ವಿಶ್ವಾಸದಿಂದ ಇರುತ್ತಿದ್ದರು. ಅವರು ಸೋತಿದ್ದರೂ, ಶಾಸಕರಾಗದೇ ಇದ್ದರೂ, ಮಂತ್ರಿಯಾಗದೇ ಇದ್ದರೂ ಮಂತ್ರಿಯಾದ ರೀತಿ, ಶಾಸಕರಾದ ರೀತಿ ನಡೆದುಕೊಳ್ಳುತ್ತಿದ್ದರು. ಇಷ್ಟು ಬೇಗ ಅವರು ನಿಧನ ಹೊಂದಿದ್ದು ನಮ್ಮೆಲ್ಲರಿಗೂ ಅತ್ಯಂತ ನೋವಾಗಿದೆ. ನೀವು ತಂದಿರತಕ್ಕ ಈ ಸಂತಾಪ ಸೂಚಕ ನಿರ್ಣಯದಲ್ಲಿ ನಾನೂ ಭಾಗಿಯಾಗುತ್ತಿದ್ದೇನೆ. ದೂದ್ಯಾನಾಯ್ಕರವರು ಹಳೆಯ ಕಾಲದ ಅಂದರೆ ಹನುಮಂತಯ್ಯನವರ ಕಾಲದವರು. ಆ ಕಾಲದಲ್ಲಿ ಸೇವೆ ಮಾಡಿರತಕ್ಕಂಥವರು; ದುಡಿದಿರತಕ್ಕಂಥವರು. ಅವರು ಪಾನ ನಿರೋಧದ ಬಗ್ಗೆ ಅಪಾರವಾಗಿ ಹೋರಾಟ ಮಾಡಿರತಕ್ಕಂಥವರು. ಸ್ವಾತಂತ್ರ್ಯ ಹೋರಾಟಗಾರರು. ಇವರಿಬ್ಬರ ನಿಧನದಿಂದ ಈ ನಾಡು ಬಡವಾಗಿದೆ. ತಾವು ತಂದಿರತಕ್ಕ ಸಂತಾಪ ಸೂಚನೆಗೆ ನನ್ನ ಸಂಪೂರ್ಣವಾದಂಥ ಬೆಂಬಲವನ್ನು ನೀಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ಇಬ್ಬರು ಮಾಜಿ ಸದಸ್ಯರಿಗೆ ತಾವು ತಂದಿರತಕ್ಕಂತ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ರಮೇಶ್‌ರವರು ಈ ಸದನದಲ್ಲಿದ್ದಾಗ ನಾವ್ಯಾರೂ ಇರಲಿಲ್ಲ. ಆದರೆ, ಅವರು ಕಾರ್ಮಿಕ ಮುಖಂಡರಾಗಿ, ಬಿ.ಇ.ಎಲ್. ಕಾರ್ಖಾನೆಯ ಕಾರ್ಮಿಕ ಸಂಘದ ಅಧ್ಯಕ್ಷರಾಗಿಯೂ ಇದ್ದರು ಎಂದು ಗೊತ್ತಿತ್ತು. ಹಾಗಾಗಿ, ಅವರು ಕಾರ್ಮಿಕ ರಂಗದಲ್ಲೂ ಕೂಡ ಕಾರ್ಮಿಕರ ಪರವಾಗಿ ಹಲವಾರು ಹೋರಾಟಗಳನ್ನು ನಡೆಸಿದಂಥ ವ್ಯಕ್ತಿ. ಮತ್ತೆ ಸಾಂಸ್ಕೃತಿಕ ರಂಗದಲ್ಲೂ ಕೆಲಸ ಮಾಡಿರತಕ್ಕಂಥವರು. ಶ್ರೀಯುತರ ಅಕಾಲಿಕವಾದಂಥ ಮರಣಕ್ಕೆ ನಾನೂ ಕೂಡ ಸಂತಾಪವನ್ನು ಸೂಚಿಸುತ್ತೇನೆ. ಅದೇ ರೀತಿಯಲ್ಲಿ ದೂದ್ಯಾನಾಯ್ಕರವರು ಹಿಂದಿನ ಕಾಲದ ತಲೆಮಾರಿಗೆ ಸೇರಿದಂಥವರು. ಅವರು ಪಾನ ನಿರೋಧದ ಬಗ್ಗೆ ಹೋರಾಟ ಮಾಡಿದಂಥವರು. ಈ ಸದನದ ಸದಸ್ಯರಾಗಿದ್ದಂಥವರು. ಅವರಿಗೂ ಕೂಡ ನಾನು ಸಂತಾಪವನ್ನು ಸಲ್ಲಿಸಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಸಭಾಧ್ಯಕ್ಷರೇ, ಇಬ್ಬರು ಮಾಜಿ ಶಾಸಕರುಗಳಿಗೆ ತಂದಿರುವ ಸಂತಾಪ ಸೂಚನೆಗೆ ನಾನೂ ಕೂಡ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಎಸ್. ರಮೇಶ್‌ರವರು ಒಂದು ವಾರದ ಹಿಂದೆ ನಮ್ಮ ಹತ್ತಿರ ಬಹಳ ಸಂತೋಷವಾಗಿ ಮಾತನಾಡಿದ್ದರು. ಅವರು ಯಾರೋ ಎಂದು ನಮಗೆ ಜ್ಞಾಪಕವೇ ಬಂದಿರಲಿಲ್ಲ. ನಾಳೆ ಇವರು ತೀರಿ ಹೋಗುತ್ತಾರೆಂದು ಯಾರಿಗೂ ಅನಿಸಿರಲಿಲ್ಲ. ಅವರ ಸಾವಿನಿಂದ ನಮಗೆ

ನೋವಾಗಿದೆ. ಯಾವಾಗಲೂ ಮನುಷ್ಯ ತೀರಿಹೋಗುವ ಟೈಮಿನಲ್ಲಿ, ಆ ಸ್ಮಶಾನದವರೆಗೂ ಹೋಗುತ್ತೇವೆ. ಪಾಪ ನೋಡಿ ಎಷ್ಟು ದೊಡ್ಡ ಮನುಷ್ಯ, ಅವರಿಗೆ ದುಡ್ಡಿದೆ ಎಲ್ಲಾ ಇದೆ, ಆದರೆ, ಈ ರೀತಿಯಾಗಿದ್ದರೆ. ಮನುಷ್ಯ ಹೋಗುವಾಗ ಏನೂ ತೆಗೆದುಕೊಂಡು ಹೋಗುವುದಿಲ್ಲ ಎಂದು ಎಲ್ಲಾ ಸಂಬಂಧದವರಿಗೆ ಹೇಳುತ್ತೇವೆ. ಸ್ಮಶಾನ ಬಿಟ್ಟು ಬಂದತಕ್ಷಣ, ಅಯ್ಯೋ ಕೋರ್ಟ್ ಕೇಸ್ ಇದೆ, ನಾನು ಅಲ್ಲಿಗೆ ಹೋಗಬೇಕು, ಇಲ್ಲಿಗೆ ಹೋಗಬೇಕು ಎಂದು ಹೇಳುತ್ತೇವೆ. ಮನುಷ್ಯನಿಗೆ ಯಾವಾಗಲೂ ಜ್ಞಾಪಕ ಇರಬೇಕು. ಅದಕ್ಕೋಸ್ಕರ ದೇವರು ಇಂತಹ ನಾಟಕವನ್ನೆಲ್ಲಾ ನಮಗೆ ತೋರಿಸುತ್ತಾನೆ. ಆದ್ದರಿಂದ, ಸಾಯುವುದು ನಿಜವೇ, ಹುಟ್ಟಿದವರೆಲ್ಲಾ ಸಾಯಲೇಬೇಕು. ಆದರೆ ಇಷ್ಟು ಚಿಕ್ಕ ವಯಸ್ಸಿನಲ್ಲಿ ತೀರಿ ಹೋಗಿರುವುದರಿಂದ, ನನಗೆ ಬಹಳ ನೋವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬದವರಿಗೆ ದುಃಖವನ್ನು ಭರಿಸತಕ್ಕ ಶಕ್ತಿ ಕೊಡಲಿ ಎಂದು ಹೇಳಿ, ನನ್ನ ಪರವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿ ಅವರ ದುಃಖದಲ್ಲಿ ನಾವೂ ಜೊತೆಯಲ್ಲಿರುತ್ತೇವೆಂದು ಹೇಳುತ್ತಾ, ತಾವು ಕೊಟ್ಟಿರುವ ಅವಕಾಶಕ್ಕಾಗಿ ವಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ಎಸ್. ರಮೇಶ್‌ರವರು ಒಬ್ಬ ಸ್ನೇಹಜೀವಿಗಳಾಗಿದ್ದರು. ಯಾವಾಗಲೂ ಸಹ ಬಡವರ ಬಗ್ಗೆ, ಕೊಳಚೆ ಪ್ರದೇಶದ ನಿವಾಸಿಗಳ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ ಹೋರಾಟ ಮಾಡುತ್ತಿದ್ದಂಥ ಒಬ್ಬ ಹೋರಾಟಗಾರ. ಮೊನ್ನೆ ಇದ್ದಕ್ಕಿದ್ದ ಹಾಗೆಯೇ ಆರೋಗ್ಯ ಸರಿ ಇದ್ದು, ಬೆಳಿಗ್ಗೆ ಈ ರೀತಿಯ ಘಟನೆ ಕೇಳಿ, ಅಲ್ಲಿಗೆ ಹೋಗಿದ್ದಾಗ, ಅಲ್ಲಿ ಸೇರಿದ್ದಂಥ ಅವರ ಆತ್ಮೀಯರು, ಕಣ್ಣೀರು ಇಡುತ್ತಿದ್ದುದ್ದನ್ನೂ ನೋಡಿದೆ. ಆ ಪರಿಸ್ಥಿತಿಯನ್ನು ನೋಡಿ, ಇನ್ನೂ ಅನೇಕ ವರ್ಷಗಳ ಕಾಲ ಈ ನಾಡಿನ ಸೇವೆ ಮಾಡಬೇಕಾದಂಥ ಯುವಕ, ಹೋರಾಟಗಾರ ಈ ರೀತಿ ವಿಧಿವಶರಾದಂಥಾದ್ದು ನಮ್ಮೆಲ್ಲರಿಗೂ ನೋವು ತಂದಂಥ ಸಂಗತಿ. ಅದೇ ರೀತಿ ದೂದ್ಯಾನಾಯ್ಕರವರು ನಮ್ಮ ಶಿವಮೊಗ್ಗ ಜಿಲ್ಲೆಯವರು. ಬಡವರ ಬಗ್ಗೆ ಕಾಳಜಿ ಇದ್ದಂಥ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿದಂಥ ವ್ಯಕ್ತಿಯಾಗಿದ್ದರು. ಒಂದು ಬಾರಿ ನನ್ನ ವಿರುದ್ಧ ವಿಧಾನಸಭೆಗೆ ಸ್ಪರ್ಧೆ ಮಾಡಿದಂಥ ಕಾಲದಲ್ಲೂ ಸಹ ಅಷ್ಟೊಂದು ಸ್ನೇಹಜೀವಿಯಾಗಿ, ಆತ್ಮೀಯತೆಯಿಂದ ಅವರು ನಡೆದುಕೊಂಡಿದ್ದನ್ನು ಬಹುಶಃ ಯಾವುದೇ ಪಕ್ಷಬೇಧಗಳಿಲ್ಲದೆ ಆತ್ಮೀಯತೆ, ವಿಶ್ವಾಸ ಇದ್ದಂಥ ಈ ಇಬ್ಬರನ್ನು ನಾವು ಕಳೆದುಕೊಂಡಿದ್ದೇವೆ. ಒಬ್ಬ ಹೋರಾಟಗಾರರನ್ನು ನಾವು ಕಳೆದುಕೊಂಡಿದ್ದೇವೆ. ತಾವು ತಂದಿರುವಂಥ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಅವರ ಆತ್ಮಕ್ಕೆ ಶಾಂತಿ ಕೋರಿ, ಈ ದುಃಖವನ್ನು ಭರಿಸುವಂಥ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಗೌರವಾನ್ವಿತ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಖರ್ಗೆಯವರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ದೃಷ್ಟಿಯಿಂದ ಇದೊಂದು ಪ್ರಿಮೆಚೂರ್ ಡೆತ್. ಇಷ್ಟು ಬೇಗನೆ ಅವರು ನಮ್ಮಿಂದ ದೂರವಾಗುತ್ತಾರೆಂದು ಭಾವಿಸಿರಲಿಲ್ಲ. ಏಕೆಂದರೆ, 5–6 ದಿವಸದ ಹಿಂದೆ, ಅವರು ನನಗೆ ಭೇಟಿಯಾಗಿದ್ದರು. ಹೋರಾಟಗಾರರು ಮತ್ತು ಛಲ ಇರತಕ್ಕಂಥವರು. ಯಾವುದೇ ವಿಚಾರದಲ್ಲಿ ಅದು ಪಕ್ಷದ ಕೆಲಸವಾಗಬಹುದು, ಪಕ್ಷದ ನಿಷ್ಠೆ ಇರಬಹುದು, ಸಾಮಾಜಿಕ ರಂಗದಲ್ಲಿ ಕೆಲಸ ಇರಬಹುದು, ಕಾರ್ಮಿಕರು ಅಥವಾ ಬಡವರು ಮತ್ತು ಸ್ಲಂ ಕೆಲಸ ಇರಬಹುದು. ಅವರು ಬಹಳ ಹೋರಾಟ ಮನೋಭಾವನೆಯಿಂದ, ಹೋರಾಟ ಮಾಡುತ್ತಿದ್ದರು. ಹಾಗಾಗಿ, ಅವರ ನಿಧನದಿಂದ ನಮ್ಮ ಪಕ್ಷಕ್ಕೆ ಬಹಳ ದೊಡ್ಡ ಹಾನಿ ಆಗಿದೆ. ವೈಯಕ್ತಿಕವಾಗಿ ನಮಗೂ ಹಾನಿಯಾಗಿದೆ. ಸಮಾಜಕ್ಕೂ ಹಾನಿ ಆಗಿದೆ. ಮತ್ತು ಅವರ ಕುಟುಂಬಕ್ಕೂ ದೊಡ್ಡ ಹಾನಿ ಆಗಿದೆ. ಅವರ ಮನಸ್ಸು ದೊಡ್ಡದು. ದೊಡ್ಡ ಹೃದಯದ ವ್ಯಕ್ತಿ. ನಾಲ್ಕು ದುಡ್ಡು ಕಿಸೆಯಲ್ಲಿದ್ದರೆ, ಅ ದಿನವೇ ಖರ್ಚು ಮಾಡುತ್ತಿದ್ದರು. ಚಿಂತನೆ ಮಾಡುವ ವ್ಯಕ್ತಿ ಅಲ್ಲ. ಹಾಗಾಗಿ ಅವರು ಬಹಳ ಪ್ರಿಮೆಚೂರ್ ಆಗಿ ನಮ್ಮಿಂದ ದೂರ ಆಗಿದ್ದಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಲ್ಲೂ ಸಹ ಅವರು ಬಹಳ ಕ್ರಿಯಾಶೀಲರಾಗಿ ಕೆಲಸ ಮಾಡಿ, ಹಲವಾರು ಒಳ್ಳೆಯ ಕೆಲಸಕ್ಕೆ ಅನುವಾಗಿದ್ದರು. ಅದೇ ಪ್ರಕಾರ ದೂದ್ಯಾನಾಯ್ಕರೂ ಸಹ ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿ, ಅವರೂ ಸಹ ಸಮಾಜಸೇವೆ ಮಾಡಿ ನಮ್ಮಿಂದ ದೂರ ಆಗಿದ್ದಾರೆ. ತಾವು ಮಂಡಿಸಿದ ಸಂತಾಪ ಸೂಚನೆಗೆ, ನಾನೂ ಧ್ವನಿಗೂಡಿಸಿ, ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೇ, ಎಸ್. ರಮೇಶ್‌ರವರು ನಮ್ಮ ಪಕ್ಷದಲ್ಲಿ ಪ್ರಮುಖ ನಾಯಕರಾಗಿ ಕೆಲಸವನ್ನು ಮಾಡಿದ್ದಾರೆ. ಅವರ ನಿಧನದಿಂದ ತಾವು ತಂದಂಥ ಸಂತಾಪ ಸೂಚನೆಗೆ ಬೆಂಬಲಿಸುತ್ತೇನೆ. ನಾನೂ ಅವರ ಕೈಕೆಳಗೆ ಯುವ ಕಾಂಗ್ರೆಸ್ ಸಂಘಟನೆಯಲ್ಲಿ ಕೆಲಸ ಮಾಡಿದ್ದೇನೆ. ಅವರು ಅಧ್ಯಕ್ಷರಾಗಿದ್ದರು ನಾನು ಆ ಸಂದರ್ಭದಲ್ಲಿ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಜೊತೆಗೆ, ಶಾಸಕರಾದರೂ ಕೂಡ 1985ರಲ್ಲಿ ಜೊತೆಯಲ್ಲೇ ಸೋತು 1989ರಲ್ಲಿ ಜೊತೆಗೆ ವಿಧಾನಸಭೆಗೆ ನಾವು ಪ್ರವೇಶ ಮಾಡಿದ್ದೆವು. ಮಂತ್ರಿಮಂಡಲಕ್ಕೂ ಕೂಡ ನಾವು ಜೊತೆಯಲ್ಲಿಯೇ ಸೇರಿದವರು. ಅಂದಿನ ಕಾಲದಲ್ಲಿ ರಾಜೀವ್‌ಗಾಂಧಿಯವರು ಬದುಕಿದ್ದಂತಹ ಸಂದರ್ಭದಲ್ಲಿ ಬಹಳ ನಿಕಟವರ್ತಿಯಾಗಿ ರಾಜೀವ್‌ಗಾಂಧಿಯವರು ನಮ್ಮಂತಹ ಯುವಕರನ್ನು ಆ ಸಂದರ್ಭದಲ್ಲಿ ಗುರುತಿಸಿ ಇಲ್ಲಿಯವರೆಗೂ ಬೆಳೆಯುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾರೆ.

ನಾನು ಒಂದು ಸಂದರ್ಭದಲ್ಲಿ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಾವೆಲ್ಲಾ ಕುಣಿಗಲ್ ಬೈ ಎಲೆಕ್ಷನ್‌ಗೆ ಹೋಗಿದ್ದೆವು. ವೈ.ಕೆ. ರಾಮಯ್ಯನವರ ಬೈ ಎಲೆಕ್ಷನ್. ಆಗ ನಾಗರಾಜಯ್ಯನವರು ಆ ಕಡೆ ಇದ್ದರು. ನಾವೆಲ್ಲಾ ಪಕ್ಷದ ಕೆಲಸಕ್ಕೆ ಹೋಗಿದ್ದೆವು. ಅಲ್ಲಿ ಆಕಸ್ಮಿಕವಾಗಿ ಒಂದು ಘಟನೆ ನಡೆಯಿತು. ಅಲ್ಲಿ ಒಂದು ಫೈರಿಂಗ್ ಆಯಿತು. ಫೈರಿಂಗ್ ಆದಾಗ ರಮೇಶ್ ಬಾತ್‌ರೂಂನಲ್ಲಿ ಅಡಗಿಕೊಂಡಿದ್ದರು. ನಾನು ಕೃಷ್ಣರಾಯರು, ಕಾಗೋಡು ತಿಮ್ಮಪ್ಪನವರು, ನಜೀರ್ ನಾವೆಲ್ಲಾ ಹೊರಗಡೆ ವರಾಂಡದಲ್ಲಿ ಇದ್ದೆವು. ಪಾಪ ಗಲಾಟೆ ನಡೆಯುತ್ತಿದೆ ಅಂತ ಹೇಳಿ ಪಾಪ ಹೆದರಿಕೊಂಡು ಇವರು ಬಾತ್‌ರೂಂನಲ್ಲಿ ಅವಿತುಕೊಂಡಿದ್ದರು. ಇರುವಂತಹ ಜನಗಳನ್ನು ರಕ್ಷಣೆ ಮಾಡುತ್ತಿದ್ದ ಗನ್‌ಮ್ಯಾನ್ ಎಲ್ಲಾ ಗಣ್ಯರು ಇದ್ದಾರೆ ಅಂತ ಹೇಳಿ ಅವರನ್ನು ರಕ್ಷಣೆ ಮಾಡಲು ಶೂಟ್ ಮಾಡಬೇಕಾದಂಥ ಪರಿಸ್ಥಿತಿ. ಆವತ್ತಿನ ಸಂದರ್ಭದಲ್ಲಿ ವಿಧಾನಸಭೆ ನಡೆಯುತ್ತಿತ್ತು. ಅಂದು ವಿರೋಧ ಪಕ್ಷದವರು ದೊಡ್ಡ ಹೋರಾಟ ಮಾಡಿ ಅವರ ಮೇಲೆ ಒಂದು ಎಫ್‌ಐಆರ್ ಕೇಸ್ ಹಾಕಿಸಿ ಕಂಪ್ಲೇಂಟ್ ಕೊಟ್ಟು ಆತನಿಂದ ರಾಜೀನಾಮೆ ತೆಗೆದುಕೊಳ್ಳುವಂತಹ ಒಂದು ಪರಿಸ್ಥಿತಿ ಬಂತು. ಮಂತ್ರಿ ಸ್ಥಾನ ತ್ಯಾಗ ಮಾಡಬೇಕಾದಂತಹ ಪರಿಸ್ಥಿತಿ, ಮಾನ್ಯ ಬಂಗಾರಪ್ಪನವರ ಮೇಲೆ ಒತ್ತಡ, ಕಾಂಗ್ರೆಸ್ಸ್ ವರಿಷ್ಠರ ಮೇಲೆ ಒತ್ತಡ, ಸರ್ಕಾರದ ಮೇಲೆ ಒತ್ತಡ ತಂದು, ಆತ ನಿರಪರಾಧಿ ಆವತ್ತು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಅದಾದ ಎರಡು ದಿನಕ್ಕೆ ಬೆಂಗಳೂರಿನಲ್ಲಿ ಅವರ ಬೆಂಬಲವಾಗಿ ಸುಮಾರು 50 ಸಾವಿರದಿಂದ ಒಂದು ಲಕ್ಷಕ್ಕೂ ಹೆಚ್ಚು ಜನ ಸೇರಿ ಒಂದು ದೊಡ್ಡ ಜನಸಮೂಹ ಬಂದು ಅವರ ಪರವಾಗಿ ನಿಂತು ಅವರ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡು ಮತ್ತೆ ಅವರಿಗೆ ಅವಕಾಶ ಕೊಡಬೇಕೆಂದು ಹೇಳಿ ನಡೆದಂತಹ ಸನ್ನಿವೇಶಗಳು ನನ್ನ ಕಣ್ಣೆದುರಿಗೇ ಕಾಣುತ್ತಿದೆ. ಹಾಗೇ ಜನರು ಅಪಾರವಾದಂತಹ ವಿಶ್ವಾಸವನ್ನು ವಿಶೇಷವಾಗಿ ಬಡವರು, ಸ್ಲಂ ಕಾಂಗ್ರೆಸ್ಸ್ ಅಂತ ಹುಟ್ಟು ಹಾಕಿದ್ದೇ ಆತ. ಸ್ಲಂ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದರ ಜೊತೆಗೆ ಸ್ಲಂ ಕಾಂಗ್ರೆಸ್ಸ್ ಅಂತ ನಮ್ಮ ಪಕ್ಷದಲ್ಲಿ ಒಂದು ಅಂಗವನ್ನು ಪ್ರಾರಂಭ ಮಾಡಿ, ಅದರ ಮುಖಾಂತರ ಸೇವೆಯನ್ನು ಮಾಡಿ ಮಾನ್ಯ ಖರ್ಗೆ ಸಾಹೇಬರು ಹೇಳಿದಂತೆ ಉತ್ತರಹಳ್ಳಿ ಕ್ಷೇತ್ರದಲ್ಲಿ ಅವರು ನಮ್ಮ ಪಕ್ಷದ ವತಿಯಿಂದ ಮೊದಲನೇ ಶಾಸಕರಾಗಿ, ಹಿಂದೆ ಇದ್ದರು, ಇತ್ತೀಚಿನ ದಿನದಲ್ಲಿ ಶಾಸಕರಾಗಿ ಕೆಲಸವನ್ನು ಮಾಡಿದ್ದಾರೆ. ಜೊತೆಗೆ ತಾವು ಇಲ್ಲಿ ಒಂದು ತಿದ್ದುಪಡಿಯನ್ನೂ ಸಹ ಸೇರಿಸಿಕೊಳ್ಳಬೇಕಾಗುತ್ತದೆ. ವೀರಪ್ಪಮೊಯ್ಲಿಯವರ ಸರ್ಕಾರದಲ್ಲೂ ಕೂಡ ಕೆಲವು ದಿವಸಗಳ ಕಾಲ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದಾರೆ. ಅದನ್ನೂ ಕೂಡ ತಾವು ತಿದ್ದುಪಡಿಯಲ್ಲಿ ಸೇರಿಸಿ. ಇಂತಹ ವಿಶೇಷವಾದಂತಹ ಬಹುಮುಖವಾದ ವ್ಯಕ್ತಿತ್ವ ಹೊಂದಿದ್ದರು. ಫಿಲಂ

ಛೇಂಬರ್‌ನಲ್ಲೂ ಕೂಡ ನಾನು ಅವರು ಜೊತೆಯಲ್ಲಿ ಕೆಲಸ ಮಾಡಿದ್ದೇವೆ. ಅವರು ಅಧ್ಯಕ್ಷರಾಗಿದ್ದರು. ಆಗ ನಾನು ಎಗ್ಜಿಕ್ಯೂಟೀವ್ ಕಮಿಟಿಯಲ್ಲಿದ್ದೆ. ಹೀಗೆ ವಿವಿಧ ರೀತಿಯಲ್ಲಿ ಅವರು ಕೆಲಸವನ್ನು ಮಾಡಿಕೊಂಡು ಈ ರಾಜ್ಯದ ಅನೇಕ ಯುವಕರಿಗೆ ಸ್ಫೂರ್ತಿಯಾಗಿ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದರು. ಅವರ ಅಗಲಿಕೆ ನನಗೂ ಆಶ್ಚರ್ಯ. ನಾನು ಒಂದು ವಾರ ಅಥವಾ 15 ದಿನಗಳ ಹಿಂದೆ ಮಾನ್ಯ ಧರಂಸಿಂಗ್ ಸಾಹೇಬರ ಮನೆಯಲ್ಲಿ ಭೇಟಿ ಮಾಡಿದ್ದೆ. ನಾನು ಅವರನ್ನು ನೋಡಿ ನೀವು ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಮಾಡಿಕೊಳ್ಳಬೇಕೆಂದು ಹೇಳಿದ್ದೆ, ಇಲ್ಲಾ ಇಲ್ಲಾ ನಾನು ಎಕ್ಸ್‌ಸೈಜ್ ಮಾಡುತ್ತಿದ್ದೇನೆ, ಜಿಮ್‌ಗೆ ಹೋಗುತ್ತಿದ್ದೇನೆ, ಅದು ಮಾಡುತ್ತಿದ್ದೇನೆ, ಇದು ಮಾಡುತ್ತಿದ್ದೇನೆಂದು ಹೇಳಿದ್ದರು. ಈಗ ಈ ಸುದ್ದಿಯನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಇವತ್ತು ಅವರು ಅಗಲಿದ್ದಾರೆ. ವಿಶೇಷವಾಗಿ ಬಹಳ ದೊಡ್ಡ ಅನ್ನದಾನಿ. ಯಾರು ಹೋದರೂ ಅವರ ಮನೆಯಲ್ಲಿ ಊಟ ಹಾಕುವುದು, ಅವನ ಹತ್ತಿರ ಇರಲಿ ಇಲ್ಲದೇ ಹೋಗಲಿ ಸಾಲ ಮಾಡಿ ಜನರಿಗೆ ಊಟ ಹಾಕಿಸುವಂತಹ ಒಂದು ವಿಶೇಷವಾದ ಗುಣವನ್ನು ಹೊಂದಿದ್ದಂತಹ ರಮೇಶ್‌ರವರು ಇವತ್ತು ನಮ್ಮ ಮಧ್ಯೆ ಇಲ್ಲ. ಅವರ ಕುಟುಂಬಕ್ಕೆ, ಅವರ ಮಕ್ಕಳಿಗೆ ಭಗವಂತ ಶಕ್ತಿ ಕೊಡಲಿ. ಅವರ ಅಪಾರವಾದ ಸ್ನೇಹವರ್ಗಕ್ಕೂ ಕೂಡ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಕೊಡಲಿ ಅಂತ ಪ್ರಾರ್ಥಿಸಿ ತಮ್ಮ ಸೂಚನೆಗೆ ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್. ರಮೇಶ್‌ರವರು ನಾನು ಪ್ರತಿನಿಧಿಸುವಂತಹ ಉತ್ತರಹಳ್ಳಿ ಕ್ಷೇತ್ರದಿಂದ ಶಾಸಕರಾಗಿದ್ದರು, ಮಂತ್ರಿಗಳಾಗಿದ್ದರು, ಮತ್ತು ನನ್ನ ಎದುರಾಳಿಯಾಗಿ ಸಹ ಎರಡು ಸಲ ಸ್ಪರ್ಧೆ ಮಾಡಿದ್ದರು. ನನಗೆ ನಾಲ್ಕು ದಿನಗಳ ಹಿಂದೆ ಬಹಳ ದಿನ ಆದ ಮೇಲೆ ಅವರು ಫೋನ್ ಮಾಡಿದ್ದರು. ಸುಮಾರು 11 ಗಂಟೆಯಲ್ಲಿ ಅವರೇ ಫೋನ್ ಮಾಡಿದ್ದರು. ಫೋನ್ ಮಾಡಿ ರಾಜ್ಯದಲ್ಲಿ ಈ ತರಹ ರೋಗ ಬಂದಿದೆ ಚಿಕೂನ್ ಗುನ್ಯಾ ಬಂದಿದೆ ಇದಕ್ಕೆ ತಾವು ಏನೇನು ಕ್ರಮ ತೆಗೆದುಕೊಂಡಿದ್ದೀರಾ, ಏನೇನು ಮಾಡಬೇಕು ಎಂದು ಬಹಳ ಮಾತನಾಡಿದರು. ಅವರು ಫೋನ್ ಮಾಡಿ ಒಂದು ವರ್ಷ ಆಗಿತ್ತು. ಮೈಸೂರಿಗೆ ಹೋಗಿ ಅವರು ಚುನಾವಣೆಗೆ ನಿಂತ ಮೇಲೆ ಅವರು ನಾನೂ ಭೇಟಿಯಾಗಿಲ್ಲ. ಅವರ ಜೊತೆ ಮಾತನಾಡುವುದಕ್ಕೆ ಆಗಿರಲಿಲ್ಲ. ಆದರೆ ಅವರು ಜ್ಞಾಪಕ ಇಟ್ಟುಕೊಂಡು ಈ ರಾಜ್ಯದಲ್ಲಿ ಹರಡಿರತಕ್ಕಂಥ ಚಿಕೂನ್ ಗುನ್ಯಾ ಬಗ್ಗೆ ಏನೇನು ನಾವು ಮಾಡಬಹುದು ಎನ್ನುವುದರ ಬಗ್ಗೆ ನನಗೆ ಸಲಹೆಯನ್ನು ಕೊಟ್ಟರು. ಮತ್ತು ಮುಂದೆ ಚುನಾವಣೆ ಯಾವಾಗ ಆಗುತ್ತದೆ, ಹೇಗೆ ಎನ್ನುವ ಬಗ್ಗೆ, ಡೀ ಲಿಮಿಟೇಶನ್ ಬಗ್ಗೆ ಈ ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಮಾತನಾಡಿದರು.

ಅದಾದ ಎರಡು ದಿನಕ್ಕೆ ಅವರು ತೀರಿಕೊಂಡಿರತಕ್ಕಂಥಾದ್ದು, ನಮಗೆಲ್ಲಾ ನೋವು ತಂದಿದೆ. ಎಸ್. ರಮೇಶ್‌ರವರು ಚುನಾವಣೆ ಸಂದರ್ಭದಲ್ಲಿ ಮಾತ್ರ ನಾವು ಅವರು ಎದುರಾಳಿಯಾಗುತ್ತಿದ್ದೆವು. ಚುನಾವಣೆಯಾದ ಮೇಲೆ ಯಾವುದೇ ರೀತಿಯಾದಂತಹ ಅಭಿವೃದ್ಧಿ ಕಾರ್ಯಕ್ಕೆ, ಡೆವಲಪ್‌ಮೆಂಟ್ ವರ್ಕ್ ಮಾಡಬೇಕಾದರೆ ಯಾವತ್ತೂ ನಮ್ಮ ಉತ್ತರಹಳ್ಳಿ ಕ್ಷೇತ್ರದಲ್ಲಿ ತೊಂದರೆಯನ್ನು ಕೊಟ್ಟಿಲ್ಲ. ಚುನಾವಣೆಯಾದ ತಕ್ಷಣವೇ ಆ ಚುನಾವಣೆಯಲ್ಲಿ ಆದಂತಹ ನೋವು ನಲಿವುಗಳನ್ನೆಲ್ಲಾ ಮರೆಯುತ್ತಿದ್ದರು. ಯಾವುದೇ ಅಭಿವೃದ್ಧಿ ಕಾರ್ಯದಲ್ಲಿ ನಮ್ಮ ಜೊತೆ ಸಹಕಾರ ಮಾಡಿ, ನಮ್ಮ ಉತ್ತರಹಳ್ಳಿ ಕ್ಷೇತ್ರದ ಅಭಿವೃದ್ಧಿಗೆ ಎಸ್. ರಮೇಶ್‌ರವರು ಬಹಳ ಶ್ರಮಪಟ್ಟಿದ್ದಾರೆ. ವಿಶೇಷವಾಗಿ ನಮ್ಮ ಕ್ಷೇತ್ರದಲ್ಲಿರತಕ್ಕಂಥ ಬಡವರ ಬಗ್ಗೆ, ವಿಶೇಷವಾಗಿ ಸ್ಲಂ ಬಗ್ಗೆ ಅವರಿಗೆ ರಮೇಶ್ ಅಂದರೆ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಸ್ಲಂ ರಮೇಶ್ ಅಂದರೆ ಗೊತ್ತಾಗುತ್ತಿತ್ತು. ವಿಶೇಷವಾಗಿ ಸ್ಲಂ ಜನಗಳಿಗೆ ಅವರ ಗುಡಿಸಲುಗಳನ್ನು ಒಡೆದು ಹಾಕಿದಾಗ ಅಲ್ಲಿಗೆ ಹೋಗಿ ಪ್ರತಿಭಟನೆ ಮಾಡಿ ಅವರ ಹಿತವನ್ನು ಕಾಪಾಡತಕ್ಕಂಥ ಒಬ್ಬ ವ್ಯಕ್ತಿ. ರಾಜಕೀಯ ರಂಗದಲ್ಲಿ ಅವರದ್ದೇ ಆದಂತಹ ಒಂದು ವ್ಯಕ್ತಿತ್ವವನ್ನು ಹೊಂದಿರತಕ್ಕಂಥವರು. ಅವರು ಯಾವುದೇ ಕೆಲಸವನ್ನು ಹಿಡಿದರೆ ಆ ಕೆಲಸವನ್ನು ಸಾಧನೆ ಮಾಡತಕ್ಕಂಥ ಒಂದು ಛಲ ಅವರಲ್ಲಿತ್ತು. ಆ ರೀತಿಯಾದಂತಹ ವ್ಯಕ್ತಿ ಮತ್ತೆ ವಿಶೇಷ ಅಂತ ಹೇಳಿದರೆ ಇಬ್ಬರೂ ನಾವು ಜಾಲಹಳ್ಳಿ ಭಾಗದಲ್ಲಿಯೇ ಬೆಳೆದಂತಹವರು. ಅವರು ಜಾಲಹಳ್ಳಿ ಹೆಚ್.ಎಂ.ಟಿ., ಬಿ.ಇ.ಎಲ್. ಕಾಲೋನಿಯಲ್ಲಿತ್ತು, ನಮ್ಮ ಮನೆಯೂ ಸಹ ಜಾಲಹಳ್ಳಿ. ಇಬ್ಬರೂ ಒಟ್ಟಿಗೆ ಚಿಕ್ಕ ವಯಸ್ಸಿನಿಂದಲೂ ಸಹ ಅಲ್ಲಿ ನಾವು ಪರಸ್ಪರ ಒಂದೇ ಹಳ್ಳಿಯಲ್ಲಿ ಬೆಳೆದಂತಹ ವಾತಾವರಣ. ಅವರು ಯೂತ್ ಕಾಂಗ್ರೆಸ್ಸ್‌ನಲ್ಲಿ ಬೆಳವಣಿಗೆಯನ್ನು ಕಂಡರು. ಮಾನ್ಯ ದಿವಂಗತ ಡಿ. ದೇವರಾಜ ಅರಸು ಅವರು ಅವರನ್ನು ಒಳ್ಳೆಯ ನಾಯಕರನ್ನಾಗಿ ಆವತ್ತು ನಿರ್ಮಾಣ ಮಾಡಿದರು. ಇವತ್ತು ವಿಶೇಷವಾಗಿ ಉತ್ತರಹಳ್ಳಿ ಕ್ಷೇತ್ರಕ್ಕೆ ಇಂತಹ ಒಬ್ಬ ನಾಯಕನನ್ನು ಕಳೆದುಕೊಂಡಂತಹ ನೋವು ಇದೆ. ಅದೇ ರೀತಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ದೂದ್ಯಾನಾಯ್ಕರವರಿಗೂ ನಾನು ಈ ಸಂದರ್ಭದಲ್ಲಿ ನನ್ನ ಸಂತಾಪವನ್ನು ಸೂಚಿಸುತ್ತೇನೆ. ವಿಶೇಷವಾಗಿ ಸನ್ಮಾನ್ಯ ರಮೇಶ್‌ರವರ ನಿಧನ ನಮ್ಮೆಲ್ಲರಿಗೂ ನೋವನ್ನು ತಂದಿದೆ, ಇಡೀ ಉತ್ತರಹಳ್ಳಿ ಕ್ಷೇತ್ರದ ಜನಕ್ಕೆ ನೋವನ್ನು ತಂದಿದೆ ಅವರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಎರಡು ಜನ ಈ ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿದಿರತಕ್ಕಂಥ ವ್ಯಕ್ತಿಗಳ ನಿಧನಕ್ಕೋಸ್ಕರ ತಾವು ತಂದಿರತಕ್ಕಂಥ ಸಂತಾಪಸೂಚಕ ನಿರ್ಣಯವನ್ನು ಬೆಂಬಲಿಸುತ್ತಾ ಎಸ್. ರಮೇಶ್‌ರವರಿಗೆ ಬಹಳ ವಯಸ್ಸೇನೂ ಆಗಿರಲಿಲ್ಲ. ಕೊಳಚೆ ಪ್ರದೇಶದ ಬಡವರು

ಮತ್ತು ಕಾರ್ಮಿಕ ಜನರ ಜೊತೆಗೆ ದುಡಿದು ಈ ರಾಜ್ಯದ ಮಂತ್ರಿಯಾಗಿ ಶಾಸಕರಾಗಿ ದುಡಿದಂತಹವರು. ಮಾನ್ಯ ಅಧ್ಯಕ್ಷರೇ, ಇವರಿಬ್ಬರೂ ಕೂಡ ಒಂದೇ ದಿವಸ ನಿಧನರಾಗಿರತಕ್ಕಂಥಾದ್ದು. 7ನೇ ತಾರೀಖು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಟೈಮ್‌ಗೆ ನಿಧನರಾಗಿರತಕ್ಕಂಥಾದ್ದು. ದೂದ್ಯಾ ನಾಯಕ್‌ರವರು ಶಿವಮೊಗ್ಗ ಜಿಲ್ಲೆಯವರು. ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರು. ಸ್ವಾತಂತ್ರ್ಯ ಹೋರಾಟಗಾರರೇ ಎಲ್ಲರೂ ಸೇರಿ ಸ್ಥಾಪಿಸಿರತಕ್ಕಂಥ ಶಿವಮೊಗ್ಗೆಯ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಲ್ಲಿ ಕೊನೆಯವರೆಗೂ ದುಡಿದಿದ್ದರು. ಮೊನ್ನೆ ನಿಧನರಾದಂತಹ ಸಂದರ್ಭದಲ್ಲೂ ಸಹ ಆಕ್ಸಿಡೆಂಟ್‌ನಲ್ಲಿ ತೀರಿಕೊಂಡಿದ್ದು. ಮಾರುತಿ 800 ಕಾರಿನಲ್ಲಿ ಅವರೇ ಸ್ವತಃ ಡ್ರೈವಿಂಗ್ ಮಾಡಿಕೊಂಡು ಬರುವಾಗ ಇನ್ನೊಂದು ವಾಹನಕ್ಕೆ ತಗುಲಿ ರಸ್ತೆಯಲ್ಲಿ ದುರ್ಮರಣಕ್ಕೆ ಒಳಗಾದವರು. ಇವತ್ತು ಅವರು ಸ್ಥಾಪಿಸಿರತಕ್ಕಂಥ ಸಂಸ್ಥೆ ಶಿವಮೊಗ್ಗ ಜಿಲ್ಲೆಯಲ್ಲಿ ಆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರ ಆಣತಿಯಂತೆ ಒಂದು ಸ್ವದೇಶಿ ಶಿಕ್ಷಣವನ್ನು ಜನರಿಗೆ ಕೊಡಬೇಕು ಅಂತ ಹೇಳಿ ದೇಶಿಯ ವಿದ್ಯಾ ಶಾಲೆ ಮತ್ತು ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ದೊಡ್ಡ ಪಾತ್ರವನ್ನು ಶಿಕ್ಷಣ ಕ್ಷೇತ್ರದಲ್ಲಿ ನಿರ್ವಹಿಸಿದ್ದಾರೆ. ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಲ್ಲಿಂತೂ ಕೂಡ ನಾಗಪ್ಪಶೆಟ್ಟರಂತಹವರು, ಕೇಲ್ಕರ್‌ರವರು, ಗಿರಿಮಾಜಿ ರಾಜಗೋಪಾಲ್‌ರವರು, ದೂದ್ಯಾ ನಾಯಕ್‌ರಂತಹ ಸ್ವಾತಂತ್ರ್ಯ ಹೋರಾಟಗಾರರೇ ಎಲ್ಲರೂ ಸೇರಿ ಕೆಲಸ ಮಾಡುತ್ತಿದ್ದರು. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಅಂಗನವಾಡಿಯಿಂದ ಹಿಡಿದು ಕಾಲೇಜಿನವರೆಗೂ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಹೆಸರಾಂತ ಇಂಜಿನಿಯರಿಂಗ್ ಕಾಲೇಜನ್ನು ಹಾಗೂ ನರ್ಸಿಂಗ್ ಕಾಲೇಜನ್ನು ತೆರೆದಿದ್ದಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಇದರಲ್ಲಿ ಪೂರ್ಣ ಸಮಯ ತೊಡಗಿಸಿಕೊಂಡು ಕೆಲಸ ಮಾಡುತ್ತಿದ್ದರು ಆ ಸಂಸ್ಥೆಯಿಂದ ಸಾವಿರಾರು ಜನಕ್ಕೆ ನೌಕರಿ ಕೊಟ್ಟಿದ್ದಾರೆ. ನನ್ನಂಥವನು ಇವತ್ತು ಶಾಸನ ಸಭೆಯಲ್ಲಿ ಕುಳಿತು ಕೆಲಸ ಮಾಡುತ್ತೇನೆಂದು ಆದರೆ ಅವರು ಕೋಣಂದೂರಿನಲ್ಲಿ ತೆರೆದಿರತಕ್ಕಂಥ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಕೊಟ್ಟಿದ್ದೇ ಕಾರಣ. ಇಲ್ಲದಿದ್ದರೆ ನಾವ್ಯಾರೂ ಕೂಡ ಮುಂದೆ ಹೋಗಲು ಆಗುತ್ತಿರಲಿಲ್ಲ. ನಮಗೆ ಆರ್ಥಿಕವಾಗಿ ಶಕ್ತಿ ಇರಲಿಲ್ಲ. ಅವರು ತೆರೆದಿರತಕ್ಕಂಥ ಶಿಕ್ಷಣ ಸಂಸ್ಥೆಯಲ್ಲಿ ನಮ್ಮಂತಹವರನ್ನೂ ಕೂಡ ಅನುವು ಮಾಡಿತು. ಇವತ್ತು ನಾವು ಶಾಸನ ಸಭೆಯಲ್ಲಿ ಬಂದು ಕುಳಿತು ಕೆಲಸ ಮಾಡಲು ಬಹಳ ದೊಡ್ಡ ಅವಕಾಶವನ್ನು ನಮಗೆ ಒದಗಿಸಿ ಕೊಟ್ಟಿದೆ. ಅಂತಹ ಮಹನೀಯರು, ಇತ್ತೀಚಿನ ದಿನಗಳಲ್ಲಿ ಕೂಡ ಯಾರಿಗಾದರೂ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾದರೆ, ಅವರಿಗೆ ಫೀಸ್‌ಗೆ ಹಣ ಕೊಡುವುದು ವಿಶೇಷವಾಗಿ ಹೆಣ್ಣುಮಕ್ಕಳ ಬಗ್ಗೆ, ಅಂಗವಿಕಲರ ಬಗ್ಗೆ ಗಮನಹರಿಸುವುದನ್ನು ಮಾಡುತ್ತಿದ್ದರು. ದಲಿತ ಸಮಾಜದಲ್ಲಿ ಹುಟ್ಟಿದ್ದ

ಅವರು ಶಾಸಕರಾಗಿದ್ದರೂ ಯಾವುದೇ ಗರ್ವ ಇಲ್ಲದೇನೇ ಸೌಜನ್ಯ ಶೀಲರಾಗಿ ಹಳ್ಳಿಯ ಸಾಮಾನ್ಯರ ಮನೆಯಲ್ಲೂ ಕೂಡ ಏನಾದರೂ ತೊಂದರೆಯಾದರೆ ಹೋಗಿ ಪಂಚಾಯ್ತಿ ಮಾಡುವುದು, ಸ್ಥಳದಲ್ಲೇ ಬಗೆಹರಿಸುವುದನ್ನು ಮಾಡುತ್ತಾ, ಅಲ್ಲಿನ ಮೈನ್ಸ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರ ದೊಡ್ಡ ಪ್ರೀತಿಗೆ ಕಾರಣರಾಗಿದ್ದರು. ಮೈನಿಂಗ್ ಹೋದ ನಂತರವೂ ಪೂರ್ಣ ಸಮಯವನ್ನು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಲ್ಲಿ ಸಮರ್ಪಣೆ ಮಾಡಿಕೊಂಡು ಅದರ ಏಳಿಗೆಗಾಗಿ ಕೆಲಸ ಮಾಡುತ್ತಿದ್ದರು. ಅವರ ನಿಧನದಿಂದ ಸಾರ್ವಜನಿಕ ಜೀವನದ ವ್ಯಕ್ತಿತ್ವವನ್ನು ಕಳೆದುಕೊಂಡು ನಾವೆಲ್ಲಾ ಬಡವಾಗಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ರಮೇಶ್‌ರವರ ಮತ್ತು ದೂದ್ಯಾನಾಯ್ಕರ ಕುಟುಂಬಕ್ಕೆ ಶಾಂತಿಯನ್ನು ಕೋರುತ್ತಾ ಅವಕಾಶಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): ಅಧ್ಯಕ್ಷರೇ, ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲಿಸುತ್ತಾ ಮಿತ್ರರಾದ ರಮೇಶ್‌ರವರು ನಾವು ಸುಮಾರು 20 ವರ್ಷದಿಂದ ಸ್ನೇಹಿತರು. ನಮ್ಮ ಪರಸ್ಪರ ಪಕ್ಷಗಳು ಬೇರೆ ಬೇರೆ ಇದ್ದರೂ ಕೂಡ ಆತ್ಮೀಯತೆಗೆ ಮತ್ತೊಂದು ಹೆಸರು ಎಸ್. ರಮೇಶ್‌ರವರು. ಯಾರ ಜತೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎಂಬುದಕ್ಕಿಂತ ಹೆಚ್ಚಾಗಿ ಯಾರೇ ಅವರ ಮನೆಗೆ ಹೋಗಲಿ ಎಲ್ಲರಿಗೂ ಶಿವಕುಮಾರ್‌ರವರು ಹೇಳಿದಂತೆ ಅವರ ಶ್ರೀಮತಿಯವರ ಒಂದು ಸತ್ಕಾರವನ್ನು ಎಂದಿಗೂ ಕೂಡ ಮರೆಯುವುದಕ್ಕೆ ಸಾಧ್ಯವಿಲ್ಲ. ಅವರು ಸಚಿವರಾಗಿದ್ದ ಸಂದರ್ಭದಲ್ಲಿ ಅವರ ಸರ್ಕಾರಿ ಮನೆಯಲ್ಲೇ ಸಾವಿರಾರು ಜನರಿಗೆ ಯಾರು ಬರುತ್ತಾರೋ ಎಲ್ಲರಿಗೂ ಕೂಡ ಬೆಳಿಗ್ಗೆ ಬಂದವರಿಗೆ ಉಪಹಾರ, ಮಧ್ಯಾಹ್ನ ಬಂದವರಿಗೆ ಊಟದ ವ್ಯವಸ್ಥೆ ಮಾಡಿ ಇತಿಹಾಸದಲ್ಲಿ ಯಾರಾದರೂ ಒಬ್ಬರು ಮಂತ್ರಿಗಳಾಗಿರುವವರನ್ನು ನೋಡಬರುವ ಅವರ ಕ್ಷೇತ್ರದವರಿರಬಹುದು, ಬೇರೆಯವರಿರಬಹುದು, ಪ್ರತಿಯೊಬ್ಬರನ್ನೂ ಒಂದೇ ಭಾವನೆಯಿಂದ ಕಾಣುತ್ತಿದ್ದ ಒಬ್ಬ ಆತ್ಮೀಯರು, ನನ್ನ ಸ್ನೇಹಿತರು ಅವರು. ಪ್ರಾಯಶಃ ಚಾಮುಂಡಿದೇವಿಗೆ ಅವರು ಅತೀ ಹತ್ತಿರದ ಭಕ್ತರು. ಆಷಾಢಮಾಸದ ಅಮಾವಾಸ್ಯೆಯಲ್ಲಿ ಎಷ್ಟು ಶುಕ್ರವಾರಗಳು ಬರುತ್ತವೋ, ಅಷ್ಟೂ ದಿವಸ ಚಾಮುಂಡಿ ದೇವಿಗೆ ಹೋಗುವ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಪ್ರಸಾದದ ವ್ಯವಸ್ಥೆ ಮಾಡಿದ ವಾಡಿಕೆ ಅವರದ್ದು. ಸುಮಾರು ಏಳೆಂಟು ವರ್ಷಗಳಿಂದ ಇದನ್ನು ನಡೆಸಿಕೊಂಡು ಬಂದಿದ್ದರು. ಮಂಗಳವಾರ ನಮ್ಮನ್ನು ಭೇಟಿ ಮಾಡಿ ಮಾತನಾಡಿ ತದನಂತರ ಗುರುವಾರದ ಸಾಯಂಕಾಲ ಅವರ ಹಿಂಬಾಲಕರಿಗೆ ಹೇಳುತ್ತಾರೆ ನಾಳೆ ಅನ್ನಸಂತರ್ಪಣೆ ಪ್ರಸಾದ ಕಾರ್ಯಕ್ರಮ ನಿಲ್ಲಿಸಿಬಿಡಿ ನಾಳೆ ಮಾಡುವುದು ಬೇಡ ಅಂತ ಹೇಳಿ ಬೆಳಿಗ್ಗೆ ಅವರು ವಿಧಿವಶರಾಗುತ್ತಾರೆ. ಇದು ಒಂದು ರೀತಿ ಕಾಕತಾಳೀಯ ಅಂತ ಕಾಣುತ್ತದೆ. ಅನಿರೀಕ್ಷಿತವಾಗಿ ಹುಟ್ಟುವ ಮನುಷ್ಯನಿಗೆ ಸಾವು ನಿಶ್ಚಿತವಾಗಿದೆ ಅನ್ನುವುದಕ್ಕೆ

ಬಂದಂತಹ ದಿನಗಳಲ್ಲಿ ಅವರು ನಡೆದುಕೊಂಡಿರುವ ರೀತಿನೀತಿಗಳು ಪ್ರಾಯಶಃ ಎಂದಿಗೂ ಚಿರಸ್ಮರಣೀಯವಾದುದು. ಅಂಥ ಒಬ್ಬ ಸನ್ಮಿತ್ರರನ್ನು ನಾವು ಕಳೆದುಕೊಂಡಿದ್ದೇವೆ. ಅಧ್ಯಕ್ಷರೇ, ನಾನು ಇವತ್ತು ಒಂದೇ ಒಂದು ಮಾತನ್ನಾಡಿ ನನ್ನ ಮಾತು ಮುಗಿಸುತ್ತೇನೆ. ರಮೇಶರು ಬೆಂಗಳೂರು ನಗರದಲ್ಲಿ ಶಾಸಕರಾಗಿ ಮಂತ್ರಿಯಾಗಿ ಇಲ್ಲಿನ ಕೊಳಚೆ ನಿವಾಸಿಗಳಿಗೆ ನಾವೂ ಸಾಮಾನ್ಯರಂತೆ ಬದುಕಬೇಕೆಂಬ ಜಾಗರೂಕತೆ ಮೂಡಿಸಿ, ಆ ಬಡವರಿಗೆ ಹಕ್ಕುಪತ್ರಗಳನ್ನು ನೀಡುವ ಸಂಪ್ರದಾಯವನ್ನು ಈ ರಾಜ್ಯಕ್ಕೆ ಕೊಟ್ಟಂಥವರು ದಿವಂಗತ ರಮೇಶ್. ಅದನ್ನು ನಾವೆಂದೂ ಮರೆಯುವ ಹಾಗಿಲ್ಲ. ಅವರು ಇವತ್ತು ನಮ್ಮನ್ನಗಲಿದ್ದಾರೆ, ಅವರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ. ಅವರನ್ನು ಕಳೆದುಕೊಂಡಿರುವ ಅವರ ಕುಟುಂಬಕ್ಕೆ ಶಕ್ತಿ ಕೊಡಲಿ ಅದೇ ರೀತಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದೂದ್ಯಾನಾಯಕರು ಪ್ರಾಯಶಃ ಈ ರಾಜ್ಯಕ್ಕೆ ಹಾಗೂ ಈ ರಾಷ್ಟ್ರಕ್ಕೆ ತಮ್ಮನ್ನೇ ಸಮರ್ಪಿಸಿಕೊಂಡಿದ್ದವರು ಎಂದು ಹೇಳಿ ಈ ಇಬ್ಬರು ಮಹನೀಯರ ಆತ್ಮಕ್ಕೂ ಶಾಂತಿ ಸಿಗಲಿ, ಅವರ ಕುಟುಂಬಕ್ಕೆ ಅದನ್ನು ಭರಿಸುವ ಶಕ್ತಿ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ): ಅಧ್ಯಕ್ಷರೇ, ತಾವೇನು ಸಂತಾಪ ಸೂಚನೆ ಮಂಡಿಸಿದ್ದೀರಿ ಅದಕ್ಕೆ ಸಂಪೂರ್ಣ ಬೆಂಬಲವನ್ನು ಇಲ್ಲಿ ವ್ಯಕ್ತಪಡಿಸುತ್ತಾ ವಿಶೇಷವಾಗಿ ಎಸ್. ರಮೇಶರು ನಮ್ಮ ತಂದೆಯವರಿಗೆ ಬಹಳಷ್ಟು ಆತ್ಮೀಯರಾಗಿ ಇದ್ದ ರಾಜಕೀಯ ಕ್ಷಣಗಳೂ ಬಂತು. ತದನಂತರ ನಾನಾ ರೀತಿಯ ರಾಜಕೀಯದಲ್ಲಿದ್ದರೂ ನಮ್ಮ ಜತೆ ಬಹಳ ಸಂಪರ್ಕವನ್ನು ಎಲ್ಲಾ ನಿಟ್ಟಿನಿಂದ ಇಟ್ಟುಕೊಂಡು ಬಂದಿದ್ದರು. ವಿಶೇಷವಾಗಿ ಅವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿ ಅಧ್ಯಕ್ಷರಾದ ಸಂದರ್ಭದಲ್ಲಿ ಕನ್ನಡ ಚಿತ್ರರಂಗದ ಹತ್ತಾರು ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಆಗ ಪಕ್ಷ ಬೇರೆ ಇತ್ತು ಸರ್ಕಾರ ಬೇರೆ ಇತ್ತು ಹೇಗಪ್ಪ ಹೋಗಿ ಕಾಣುವುದು, ನಾನು ಕಾಂಗ್ರೆಸ್‌ನವನು ಅನ್ನುವ ಪರಿಸ್ಥಿತಿ ಇತ್ತು. ಕನ್ನಡ ಚಿತ್ರರಂಗಕ್ಕೆ ಬೇಕಾಗಿದ್ದ ಅನುಕೂಲಗಳನ್ನು ತಮ್ಮದೇ ಆಗಿರತಕ್ಕ ಸ್ನೇಹದ ಸೇತುವೆ ಮೇಲೆ ತೆಗೆದುಕೊಂಡು ಹೋಗಿ ಅದರ ಬಗ್ಗೆ ಬಹಳಷ್ಟು ಕಾಳಜಿ ವಹಿಸಿದ್ದ ಒಬ್ಬ ಸ್ನೇಹಜೀವಿ. ನಾವು 20 ಜನ ಸೇರಿ ಎರಡು ಮೂರು ದಿನ ಜೋಗಕ್ಕೆ ಹೋಗಬೇಕು ಅಂತ ಮಾಡಿದ್ದೆವು. ಆಗ ಇವರು ಯಾವುದೋ ಕಾರಣಕ್ಕೆ ಒಂದು ದಿನ ಹಿಂದೆ ಉಳಿದರು. ಆಗ ಇಲ್ಲ ನಾನು ಮಾತು ಕೊಟ್ಟುಬಿಟ್ಟಿದ್ದೇನೆ ಅಂತ ಅವರೊಬ್ಬರೇ ಒಂದು ದಿನಕ್ಕೆ ಅಲ್ಲಿವರೆಗೆ ಹೆಲಿಕಾಪ್ಟರ್ ಮಾಡಿಕೊಂಡು ಬಂದು ನಮ್ಮ ಜತೆ ಇದ್ದು ವಾಪಸ್ ಬಂದುಬಿಟ್ಟರು. ಎಲ್ಲರೂ ಅವರ ಸ್ನೇಹದ ಬಗ್ಗೆ ಹೇಳಿದರು, ಎಲ್ಲರ ಜತೆ ಸ್ನೇಹಜೀವಿಯಾಗಿದ್ದ ವಿಶೇಷ ವ್ಯಕ್ತಿ ಅವರು. ದೂದ್ಯಾನಾಯ್ಕರ ಬಗ್ಗೆ ಕೆಲವು ವಿಚಾರಗಳು. ಅವರು ನಮ್ಮ

ಜಿಲ್ಲೆಯವರು. ನನ್ನ ಜಿಲ್ಲೆಯಲ್ಲಿ, ನಾನು ರಾಜಕೀಯಕ್ಕೆ ಬಂದ ಈ 10–12 ವರ್ಷಗಳಲ್ಲಿ ನೀನು ಒಳ್ಳೆಯ ಆದರ್ಶ ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು, ಒಳ್ಳೆಯತನವನ್ನು ನೀನು ರೂಢಿಮಾಡಿಕೊಳ್ಳಬೇಕು, ಸಂಘಸಂಸ್ಥೆಗಳನ್ನು ಕಟ್ಟುವಾಗ ಒಬ್ಬರಿಂದಲೇ ಇದು ಸಾಧ್ಯವಾಗುವುದಿಲ್ಲ ಎಲ್ಲಾರೂ ಒಟ್ಟಿಗೆ ಸೇರಿಕೊಂಡು ಕೆಲಸ ಮಾಡಿದರೆ ಈ ತರಹದ ಸಾಧನೆ ಮಾಡಬಹುದು ಅಂದಿದ್ದರು. ಇವತ್ತು ನ್ಯಾಷನಲ್ ಎಜ್ಯುಕೇಷನ್ ಸೊಸೈಟಿ ಇವತ್ತೇನು ಇಂಜಿನಿಯರಿಂಗ್ ಕಾಲೇಜು ಎಲ್ಲಾ ಮಾಡಿದೆ; ಗಿರಿಮಾಜಿ ರಾಜಗೋಪಾಲ್ ಇರಬಹುದು ಎಸ್ ತಿಮ್ಮಯ್ಯ ಇರಬಹುದು, ದೂದ್ಯಾ ನಾಯ್ಕರು ಇರಬಹುದು ಇವರೆಲ್ಲಾ ತಮ್ಮನ್ನು ಗಂಧದ ಕೊರಡಿನಂತೆ ತೇದುಕೊಂಡು ಮತ್ತೊಬ್ಬರಿಗೆ ಒಳ್ಳೆಯದನ್ನು ಬಯಸಿದ ಆದರ್ಶ ವ್ಯಕ್ತಿಗಳು. ಅದರಲ್ಲೂ ದೂದ್ಯಾ ನಾಯ್ಕರವರು 75 ವರ್ಷ ಆಗಿದ್ದರೂ ಅವರೇ ವೆಹಿಕಲ್ ಡ್ರೈವ್ ಮಾಡುತ್ತಾ ಬೆಳಿಗ್ಗೆ ಶಿವಮೊಗ್ಗಕ್ಕೆ ಬಂದು ಕೆಲಸ ಮಾಡಿ ಮತ್ತೆ ಹೋಗುವ ಸಂದರ್ಭದಲ್ಲಿ ಅಪಘಾತವಾಗಿ ಹೋಗಿರುವುದು ನಮ್ಮೆಲ್ಲರಿಗೂ ಬಹಳ ದೊಡ್ಡ ನಷ್ಟವನ್ನು ತಂದು ಕೊಟ್ಟಿದೆ. ವಿಶೇಷವಾಗಿ ರಮೇಶ್ ಮತ್ತು ದೂದ್ಯಾನಾಯ್ಕರ ಸಂಪರ್ಕ ನಾವು 10–15 ವರ್ಷದಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ ಬಂದ ಮೇಲೆ ವಿಶೇಷ ವ್ಯಕ್ತಿಗಳನ್ನು ನಾವು ಕಳೆದುಕೊಂಡಿದ್ದೇವೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳನ್ನು ಸಲ್ಲಿಸಿ ಎರಡು ಮಾತು ಮುಗಿಸುತ್ತೇನೆ.

ಶ್ರೀ ಆರ್. ದಿನೇಶ ಗುಂಡೂರಾವ್ (ಗಾಂಧಿನಗರ): ಅಧ್ಯಕ್ಷರೇ, ರಮೇಶರ ನಿಧನದಿಂದ ಎಲ್ಲರಿಗೂ ದುಃಖವಾಗಿದೆ. ಈಗಾಗಲೇ ಹೇಳಿದಂತೆ ರಮೇಶ್‌ರವರು ಹುಟ್ಟು ಹೋರಾಟಗಾರರು. ತಮ್ಮ ಸ್ವಂತ ಶ್ರಮ ಪ್ರಯತ್ನದಿಂದ ಅವರು ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಮೇಲು ಬಂದಿದ್ದ ವ್ಯಕ್ತಿ. ಮತ್ತು ನನ್ನ ತಂದೆ ಮತ್ತು ನನ್ನ ಜತೆ ಕೂಡ ಹತ್ತಿರದಿಂದ ಕೆಲಸ ಮಾಡಿದ ವ್ಯಕ್ತಿಯಾಗಿದ್ದರು. ಅವರು ಯುವ ಕಾಂಗ್ರೆಸ್ ಮತ್ತು ಕಾರ್ಮಿಕ ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದ ಒಬ್ಬ ಯುವ ನಾಯಕರಾಗಿದ್ದರು. ಕೇವಲ ಒಂದೇ ಸಲ ಶಾಸಕರಾಗಿದ್ದರೂ ಕೂಡ ಇಡೀ ರಾಜ್ಯಕ್ಕೆ ಎಸ್. ರಮೇಶ್ ಯಾರು ಅಂತ ಪರಿಚಯವಾಗಿದ್ದ ವ್ಯಕ್ತಿ. ಅವರು ವರ್ಣರಂಜಿತ ಮತ್ತು ಧೈರ್ಯವಂತ. ಇದ್ದುದ್ದನ್ನು ಹೇಳುತ್ತಿದ್ದ, ಮುನ್ನುಗ್ಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯಾಗಿದ್ದರು. ಅನೇಕರು ಮೂರ ನಾಲ್ಕು ಸಲ ಶಾಸಕರಾಗುತ್ತಾರೆ. ಆದರೆ ಅವರ ಹೆಸರೇ ಜನರಿಗೆ ಗೊತ್ತಿರುವುದಿಲ್ಲ. ರಮೇಶ್‌ರವರು ಹಾಗಿರಲಿಲ್ಲ. ಒಂದು ಟರ್ಮ್ ಶಾಸಕರಾಗಿದ್ದರೂ ಅವರ ಬಗ್ಗೆ, ಅವರು ಏನು ಮಾಡಿದರು ಅಂತ ರಾಜ್ಯದ ಜನತೆಗೆ ಗೊತ್ತಿತ್ತು; ಅಂತಹ ಜನಪ್ರಿಯತೆ ಪಡೆದಿದ್ದರು. ಕೇವಲ ರಾಜ್ಯಮಟ್ಟದಲ್ಲೇ ಅಲ್ಲ, ರಾಷ್ಟ್ರ ಮಟ್ಟದಲ್ಲೂ ಕೂಡ, ದಿವಂಗತ ರಾಜೀವ ಗಾಂಧಿ ಅವರ ಬಗ್ಗೆ ಬಹಳ ಪ್ರೀತಿ ಮಾಡುತ್ತಿದ್ದ ವ್ಯಕ್ತಿಯಾಗಿದ್ದರು. ಅಂಥ ಹೋರಾಟದ ಧೀಮಂತ ವ್ಯಕ್ತಿತ್ವ ಇವತ್ತು ನಮ್ಮ ಜತೆಯಲ್ಲಿಲ್ಲ. ಅಭಿವೃದ್ಧಿ ಕೆಲಸದ ವಿಚಾರದಲ್ಲೂ,

ಉತ್ತರಹಳ್ಳಿ ಶಾಸಕರಾಗಿದ್ದಾಗ ಆದಂತಹ ಕೆಲಸಗಳನ್ನು ಈವತ್ತು ಕೂಡ ಜನ ತುಂಬಾ ಹೊಗಳುತ್ತಾರೆ. ಇಲ್ಲಿ ಅಶೋಕ್ ಇಲ್ಲ, ಚನ್ನಿಗಪ್ಪನವರಿಗೆ ಗೊತ್ತಿರುತ್ತದೆ. ಯಾವ ರೀತಿಯಲ್ಲಿ ಅವರು ಕೆಲಸ ಮಾಡಿದರು ಅಂತ. ಆಶ್ರಯ ಯೋಜನೆಯಡಿ ಉತ್ತರಹಳ್ಳಿ ಒಂದೇ ಕ್ಷೇತ್ರದಲ್ಲಿ ಬಡವರಿಗೆ 40 ಸಾವಿರ ಆಶ್ರಯ ಸೈಟ್‌ಗಳನ್ನು ಕೊಟ್ಟರು. ಅವರ ಟರ್ಮ್‌ನಲ್ಲಿ ಮೂರು ಸಾವಿರ ಬೋರ್‌ವೆಲ್‌ಗಳನ್ನು ಹಾಕಿಸಿದರು. ಇವತ್ತೂ ಕೂಡ ಜನರು ಅದನ್ನೆಲ್ಲಾ ನೆನೆಸುತ್ತಾರೆ ಮತ್ತು ಮೊನ್ನೆ ಅವರು ತೀರಿಹೋದಾಗ ಆ ಒಂದು ಅಂತ್ಯಕ್ರಿಯೆಗೆ ಸಾವಿರಾರು ಬಡ ಜನರು, ದಲಿತರು, ಹಿಂದುಳಿದ ವರ್ಗದವರು ಅವರೇ ಬಂದಿರತಕ್ಕಂಥದ್ದು. ಇದೇನು ತೋರಿಸುತ್ತದೆಂದು ಹೇಳಿದರೆ ಅವರ ಒಂದು ಕಾಳಜಿ, ಕೆಲಸ ಮಾಡತಕ್ಕ ವಿಚಾರದಲ್ಲಿ ಅವರು ಯಾವ ರೀತಿ ಕೆಲಸವನ್ನು ಮಾಡುತ್ತಿದ್ದರು, ಮತ್ತು ಬಡ ಜನರ ಬಗ್ಗೆ ಯಾವಾಗಲೂ ಅವರು ಇದ್ದದ್ದನ್ನು ಇದ್ದ ಹಾಗೇ ಹೇಳುತ್ತಿದ್ದರು. ಬಹುಶಃ ಅವರು ಸೋಲುವುದಕ್ಕೆ ಕಾರಣವೇನೆಂದರೆ ಒಂದೊಂದು ಸಲ ಅವರು ಏನೇನೋ ಮಾತನಾಡಿ ಬಿಡುವರು ಅದರ ಮುಖಾಂತರ ಸೋತಿದ್ದಾರೆಯೇ ಹೊರತು ಕೆಲಸ ಮಾಡಲಿಲ್ಲ. ಅಥವಾ ಅಭಿವೃದ್ಧಿ ಮಾಡಲಿಲ್ಲ, ಆ ಒಂದು ವಿಚಾರದಲ್ಲಿ ಯಾರೂ ಕೂಡ ಅವರ ಬಗ್ಗೆ ಏನೂ ಹೇಳಲಿಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಅವರು ತೀರಿಹೋಗಿರುವುದು ನಮಗೂ ಕೂಡ ಬಹಳ ದುಃಖವಾಗಿದೆ. ನಮ್ಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯಲ್ಲೂ ಕೂಡ ಅವರು ಬಹಳ ಕ್ರಿಯಾಶೀಲರಾಗಿ ಕೆಲಸವನ್ನು ಮಾಡಿದರು. ಮತ್ತು ಇವರು ಅನೇಕ ಸಲ ಬ್ರಾಹ್ಮಣ ಸಭೆಗಳಲ್ಲಿ ರಾಜಕಾರಣಿಗಳೇ ನಾವುಗಳು ಆ ಸಭೆಗಳಲ್ಲಿ ಹೆಚ್ಚು ಭಾಗವಹಿಸುವುದಿಲ್ಲ. ಏಕೆಂದರೆ ಏಕೆ ಅಲ್ಲಿ ಸೇರಿಕೊಳ್ಳಬೇಕೆಂದು ಅನೇಕ ಜನರು ಹಿಂಜರಿಯುತ್ತಾರೆ. ವಿಶೇಷವಾಗಿ ನಮ್ಮ ಸಮಾಜದಲ್ಲಿ. ಆದರೆ ರಮೇಶ್‌ರವರು ಯೋಚನೆಯನ್ನೇ ಮಾಡುತ್ತಿರಲಿಲ್ಲ. ಅವರೂ ಕೂಡ ಧೈರ್ಯವಾಗಿ ಮುನ್ನುಗ್ಗಿ ಕೆಲಸವನ್ನು ಮಾಡುತ್ತಿದ್ದರು. ಮತ್ತು ಕೆಲಸ ಮಾಡುವ ಸಂದರ್ಭದಲ್ಲಿ ಎಲ್ಲರಿಗೂ ಕೂಡ ಬ್ರಾಹ್ಮಣ ಮಹಾ ಸಭೆಯ ಒಂದು ಕೆಲಸದಲ್ಲೂ ಕೂಡ ತುಂಬಾ ಮುನ್ನುಗ್ಗಿ ಕೆಲಸ ಮಾಡತಕ್ಕಂಥವರಾಗಿದ್ದರು. ಆ ಮಹಾಸಭೆಯವರೂ ಕೂಡ ಅವರ ಬಗ್ಗೆ ಯಾವತ್ತೂ ಕೂಡ ಗೌರವವನ್ನು ಇಟ್ಟುಕೊಂಡಿದ್ದರು. ಇವತ್ತು ಕೂಡ ಆ ರೀತಿ ಮತ್ತೊಬ್ಬರು ಬಂದು ಕೆಲಸವನ್ನು ಮಾಡುವುದು ಕಷ್ಟ ಇದೆ. ಆ ರೀತಿ ಇವರು ಮುನ್ನುಗ್ಗಿ ಕೆಲಸವನ್ನು ಮಾಡುತ್ತಿದ್ದರು. ಆದ್ದರಿಂದ ಅವರ ಬಗ್ಗೆ ನಾನೂ ಕೂಡ ಸಂತಾಪವನ್ನು ವ್ಯಕ್ತಪಡಿಸುತ್ತಾ ಅದೇ ರೀತಿ ಮತ್ತೊಬ್ಬ ಶಾಸಕರಾದ ದೂದ್ಯನಾಯ್ಕರವರ ಬಗ್ಗೆ ಕೂಡ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಆರ್. ಸೀತಾರಾಂ (ಮಲ್ಲೇಶ್ವರಂ): ಮಾನ್ಯ ಅಧ್ಯಕ್ಷರೇ, ಇಂದು ತಾವು ಮಂಡಿಸಿರುವ ಎಸ್. ರಮೇಶ್ ಮತ್ತು ದೂದ್ಯಾನಾಯ್ಕರವರ ಬಗ್ಗೆ ಸಂತಾಪ ಸೂಚನೆಯಲ್ಲಿ ಭಾಗವಹಿಸುತ್ತಾ ಇಲ್ಲಿ ಬಹುತೇಕ ಜನರ ಮಿತ್ರರಾಗಿದ್ದ ನಮ್ಮ ರಮೇಶ್‌ರವರು ಕಾಂಗ್ರೆಸ್ ಪಕ್ಷದಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಹೆಚ್ಚು ಆಸಕ್ತಿಯಿಂದ ಮತ್ತು ನಿಷ್ಠೆಯಿಂದ ನಮ್ಮ ಪಕ್ಷದ ಎಲ್ಲಾ ವರ್ಗದ ಜನರ ಬಗ್ಗೆ ಅವರು ಕಾಳಜಿಯನ್ನು ವಹಿಸಿ ಹೋರಾಡಿದರು. ಅವರು ರಾಜಕೀಯದಲ್ಲಿ ಒಂದೇ ಬಾರಿ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದರೂ ಸಹಾ ಕಳೆದ ಮೂವತ್ತು ವರ್ಷಗಳು ಅವರು ನಮ್ಮ ಉತ್ತರಹಳ್ಳಿ ಕ್ಷೇತ್ರದ ವಿಶೇಷವಾಗಿ ಕೊಳಗೇರಿಗಳಲ್ಲಿ ಅವರು ಹೆಚ್ಚಿನ ಸೇವೆಯನ್ನು ಮಾಡಿದ್ದಾರೆ. ಮತ್ತೆ ಜೊತೆಯಲ್ಲಿ ನಮ್ಮ ಬಿಇಎಲ್ ಫ್ಯಾಕ್ಟರಿಯ ಕಾರ್ಮಿಕರ ಸೇವೆಯನ್ನೂ ಮಾಡಿದ್ದಾರೆ. ಮತ್ತು ಫಿಲಂ ಛೇಂಬರ್ ಆಫ್ ಕಾಮರ್ಸ್‌ನಲ್ಲೂ ಅವರು ಅಧ್ಯಕ್ಷರಾಗಿ ಸೇವೆಯನ್ನು ಮಾಡಿದ್ದಾರೆ. ಬಹಳ ಸಣ್ಣ ವಯಸ್ಸಿನಲ್ಲಿ ಅವರು ನಮ್ಮೆಲ್ಲರನೂ ಅಗಲಿ ಹೋಗಿದ್ದಾರೆ. ಆ ನಷ್ಟವನ್ನು ಭರಿಸುವ ಶಕ್ತಿಯನ್ನು ಅವರ ಪತ್ನಿ ಮತ್ತು ಮಕ್ಕಳಿಗೆ ಆ ಭಗವಂತನು ನೀಡಲಿ ಎಂದು ಹೇಳಿ ನಾನು ಇಲ್ಲಿ ಪ್ರಾರ್ಥಿಸುತ್ತಾ ಜೊತೆಯಲ್ಲಿ ದೂದ್ಯಾನಾಯ್ಕರವರಿಗೂ ಸಹಾ ಸಂತಾಪವನ್ನು ಸೂಚಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿನ್. ಯೋಗೀಶ್‌ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್. ರಮೇಶ್ ಹಾಗೂ ದಲಿತ ನಾಯಕರು ಅಷ್ಟು ಮಾತ್ರವಲ್ಲ, ವಿಶೇಷವಾಗಿ ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ವಹಿಸಿ ತಮ್ಮ ಜೀವನವನ್ನು ಅದಕ್ಕೋಸ್ಕರ ಮುಡುಪಾಗಿಟ್ಟಿದ್ದ ಶ್ರೀ ದೂದ್ಯನಾಯ್ಕ ಇವರ ನಿಧನಕ್ಕೆ ಸಂತಾಪ ಸೂಚನೆಯನ್ನು ತಾವು ತಂದಿರುವಂಥದ್ದನ್ನು ನಾನು ಬೆಂಬಲಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ದೇವರು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತಾ ನಾನು ವಿಶೇಷವಾಗಿ ಇನ್ನೊಂದು ಪ್ರಸ್ತಾವನೆಯನ್ನು ತಮ್ಮ ಗಮನಕ್ಕೆ ನೀಡಲು ಇಚ್ಚಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಕಾಂಗ್ರೆಸ್ ನಾಯಕರು, ಸ್ವಾತಂತ್ರ್ಯ ಹೋರಾಟಗಾರರು, ಹಾಗೂ ವಿಧಾನಪರಿಷತ್ತಿನ ಮಾಜಿ ಸದಸ್ಯರೂ ಆಗಿದ್ದ ಶ್ರೀ ಮಾಣೂರು ವಾಸುದೇವ ಕಾಮತ್ ಅವರು ನಿನ್ನೆ ನಿಧನ ಹೊಂದಿದ್ದಾರೆ. ಪರಿಷತ್ತಿನಲ್ಲಿ ಅವರ ಬಗ್ಗೆ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಯುತ್ತಿರುವುದರಿಂದ, ಇಲ್ಲಿಯೂ ಕೂಡ ಅವರ ಬಗ್ಗೆ ಶ್ರದ್ಧಾಂಜಲಿಯನ್ನು ತರುವುದು ಸೂಕ್ತವೆಂದು ಹೇಳಿ ನನ್ನ ಅನಿಸಿಕೆಯನ್ನು ದಾಖಲಿಸಲು ಇಚ್ಚಿಸುತ್ತೇನೆ.

ಅಧ್ಯಕ್ಷರು: ಆ ಸಂಪ್ರದಾಯವನ್ನು ಅಲ್ಲಿ ಮಾಡುತ್ತಾರೆ. ಇಲ್ಲಿ ಮಾಡುವುದಿಲ್ಲ. ಅದನ್ನು ಪರಿಷತ್ತಿನಲ್ಲಿ ಮಾಡುತ್ತಾರೆ. ನಮ್ಮ ಸಂಪ್ರದಾಯದ ಪ್ರಕಾರ ನಾವು ಇಲ್ಲಿ ಮಾಡುವುದಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ರಮೇಶ್‌ರವರ ನಿಧನದ ಬಗ್ಗೆ ತಾವು ತಂದಿರುವ ಸಂತಾಪ ಸೂಚನೆಗೆ ನಾನೂ ಸಹ ಬೆಂಬಲವನ್ನು ಸೂಚಿಸುತ್ತಾ ಮಾಜಿ ಸಚಿವರಾಗಿ, ಮಾಜಿ ಶಾಸಕರಾಗಿ ಬಹುಶಃ ಅಪರೂಪದ ವ್ಯಕ್ತಿ ಎಂದು ಹೇಳಿ ನಾವು ಭಾವಿಸಬೇಕಾಗುತ್ತದೆ. ಇಡೀ ರಾಜ್ಯದಲ್ಲಿ, ರಾಷ್ಟ್ರಮಟ್ಟದಲ್ಲಿ ಒಂದೇ ಬಾರಿ ಶಾಸಕರಾಗಿ ಬಹಳ ಕಡಿಮೆ ದಿನದ ಮಂತ್ರಿಯ ಕೆಲಸವನ್ನು ಮಾಡಿ ಇಡೀ ರಾಜಕೀಯದ ಒಂದು ವ್ಯವಸ್ಥೆಯಲ್ಲಿ ಹೆಚ್ಚಿನ ಸ್ನೇಹವನ್ನು ಸಂಪಾದಿಸಿರುವ ಅಪರೂಪದ ವ್ಯಕ್ತಿ. ಹಿರಿಯರಾದರೂ ಚಿಕ್ಕವರ ಜೊತೆಯಲ್ಲೂ ಸಹಾ ಬಹಳ ಸಲಿಗೆ ಮತ್ತು ವಿಶ್ವಾಸವನ್ನು ಗಳಿಸಿದಂಥ ಮತ್ತು ಬೇರೆಯವರಿಗೆ ಮಾದರಿಯಾದ ಒಬ್ಬ ವ್ಯಕ್ತಿ. ನಮಗೆ ಇತ್ತೀಚಿನ ದಿನಗಳಲ್ಲಿ ಪರಿಚಯವಿದ್ದರೂ ಸಹಾ, ಅವರು ಬಹಳ ಅಪರೂಪದ ತುಂಬಾ ಹಳೆಯ ಪರಿಚಯವಿರುವ ರೀತಿಯಲ್ಲಿ ನಮ್ಮೆಲ್ಲರ ಸ್ನೇಹವನ್ನು, ವಿಶ್ವಾಸವನ್ನು ಇಟ್ಟುಕೊಂಡಿದ್ದವರು. ಅವರ ಸಾವಿನ ಬಗ್ಗೆ ಕೇಳಿ ನಿಜಕ್ಕೂ ಸಹಾ ಇಡೀ ರಾಜ್ಯದ ಜನತೆಗೆ ಒಂದು ನೋವನ್ನು ತಂದುಕೊಟ್ಟಿದೆ ಎಂದು ಹೇಳುತ್ತೇನೆ. ಮತ್ತು ಸ್ಲಮ್ ರಮೇಶ್ ಎಂದೇನು ಹೆಸರನ್ನು ಅವರಿಗೆ ಕರೆಯುತಿದರ. ಆ ರೀತಿ ಸುಮ್ಮನೆ ಕರೆಯಲಿಕ್ಕೆ ಸಾಧ್ಯವಿಲ್ಲ. ಬಡಜನರ ಬಗ್ಗೆ ಹೆಚ್ಚು ಕಾಳಜಯನ್ನು ಇಟ್ಟುಕೊಂಡಿದ್ದಂಥ ಈ ವ್ಯಕ್ತಿ ಬಹಳ ಅಧಿಕಾರದ ಕಡಿಮೆ ಅವಧಿಯಲ್ಲಿ ಎಲ್ಲರ ಪ್ರೀತಿಯನ್ನು ಸಂಪಾದನೆಯನ್ನು ಮಾಡಿದ್ದಾರೆ ಅಥವಾ ಪ್ರೀತಿಯನ್ನು ಗಳಿಸಿದ್ದಾರೆಂದರೆ ನಿಜಕ್ಕೂ ಸಹಾ ಅವರು ಈ ಚಿಕ್ಕ ವಯಸ್ಸಿನಲ್ಲಿ ಅವರನ್ನು ಕಳೆದುಕೊಂಡಿರುವುದು ಇಡೀ ರಾಜ್ಯಕ್ಕೆ ಒಂದು ತುಂಬಲಾರದ ನಷ್ಟವೆಂದು ಹೇಳಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗದವರಿಗೂ ಸಹಾ ದುಃಖವನ್ನು ಭರಿಸುವ ಶಕ್ತಿಯನ್ನು ಆ ದೇವರು ಕರುಣಿಸಲಿ ಎಂದು ಹೇಳಿ ಅವರಿಗೆ ನನ್ನ ಸಂತಾಪ ಸೂಚನೆಯನ್ನು ವ್ಯಕ್ತಪಡಿಸಿ ಮತ್ತೆ ದೂಡ್ಯನಾಯ್ಕ ಅವರೂ ಸಹಾ ಈ ಸದನದ ಸದಸ್ಯರಾಗಿ, ಹಿರಿಯರಾಗಿ ಸ್ವಾತಂತ್ರ್ಯ ಹೋರಾಟಗಾರರಾಗಿ ಸೇವೆಯನ್ನು ಸಲ್ಲಿಸಿದ್ದಾರೆ ಅವರ ನಿಧನದ ಬಗ್ಗೆಯೂ ಸಹಾ ನನ್ನ ಸಂತಾಪವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೂ ಶಾಂತಿಯನ್ನು ಕೋರಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ಇವತ್ತೇನು ಮಾಜಿ ಸಚಿವರಾದ ರಮೇಶ್ ಮತ್ತು ದೂಡ್ಯನಾಯ್ಕ ಅವರ ಈ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದನ್ನು ಬೆಂಬಲಿಸುತ್ತಾ ಮಾನ್ಯ ರಮೇಶ್ ಅವರನ್ನು ಸುಮಾರು 15 ವರ್ಷಗಳಿಂದ ನಾನು ಬಲ್ಲೆ. ಅವರಲ್ಲಿರುವ ವಿಶೇಷವಾದ ಗುಣವೆಂದರೆ ಸರಳತನ ಮತ್ತು ಸ್ನೇಹಜೀವಿಗಳಾಗಿದ್ದರು. ಈಗ ದಿನೇಶ್‌ರವರು ಹೇಳಿದ ಹಾಗೆ ಅವರು ಕೆಲವೇ ಸಣ್ಣ ಅವಧಿಯಲ್ಲಿ ಸಚಿವರಾಗಿದ್ದರೂ ಸಹ ಎಷ್ಟು ವರ್ಷ ಮಂತ್ರಿಯಾಗಿದ್ದರು ಎನ್ನುವುದಕ್ಕಿಂತ ಹೆಚ್ಚಾಗಿ ಮಂತ್ರಿಯಾಗಿದ್ದ ಅವಧಿಯಲ್ಲಿ

ಸಾಮಾನ್ಯ ಜನಗಳ ಧ್ವನಿಯಾಗಿ ಇದ್ದಂಥ ಒಬ್ಬ ಮಹಾನ್ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಇವತ್ತು ಅವರ ಕುಟುಂಬಕ್ಕೆ ಆ ನೋವನ್ನು ಭರಿಸುವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತಾ ಚಲನಚಿತ್ರರಂಗದಲ್ಲಿ ವಿಶೇಷವಾಗಿ ಅವರು ಶಾಸಕರಾಗಿ ಹೇಗೇಗೆ ಇದ್ದರೋ, ಅವರು ಚಲನಚಿತ್ರದಲ್ಲಿ ಒಂದು ಪಾತ್ರವನ್ನು ಸಹಾ ಮಾಡಿದ್ದರು. ಅಷ್ಟು ಸರಳತನ ಇತ್ತು. ಯಾವುದೇ ಆಡಂಬರ ಇರುತ್ತಿರಲಿಲ್ಲ. ಮತ್ತೆ ಜೊತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದಾಗ ನಮ್ಮ ಕ್ಷೇತ್ರದಲ್ಲಿ ಗೊರುರು ರಾಮಸ್ವಾಮಿ ಅಯ್ಯಂಗಾರ್‌ರವರು ಕಾಲವಾದ ದಿನಗಳಲ್ಲಿ ಆ ರಸ್ತೆಗೆ ಅವರ ಹೆಸರನ್ನು ಇಡಬೇಕೆಂದು ಹೇಳಿದ್ದನ್ನು ಕಳೆದ 10–15 ದಿನಗಳ ಹಿಂದೆ ಲಾಂಜ್‌ನಲ್ಲಿ ಬಂದಾಗ ನೆನಪು ಮಾಡಿಕೊಂಡು ಏನಾಯಿತಪ್ಪ ಅದು, ಹೆಸರು ಏಕೆ ಇಟ್ಟಿಲ್ಲವೆಂದು ನೆನಪು ಮಾಡಿ ನನ್ನನ್ನು ಕೇಳುತ್ತಿದ್ದರು. ಬಹಳಷ್ಟು ಅವರು ಪಕ್ಷಭೇದವನ್ನು ಮರೆತು ಆ ಗಡಿಯನ್ನು ಮೀರಿದಂಥ ಸ್ನೇಹಜೀವಿ ಅವರು. ಅಂಥವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಮತ್ತು ಯುವಕರಿಗೆ ಅವರು ವಿಶೇಷವಾಗಿ ಗೌರವವನ್ನು ಕೊಡುತ್ತಿದ್ದರು. ಮತ್ತು ಬಡಜನರ ಪರವಾಗಿ ನಿರಂತರ ಹೋರಾಟವನ್ನು ಮಾಡಿದಂಥವರು. ಇಂಥವರನ್ನು ಕಳೆದುಕೊಂಡಿದ್ದೇವೆ. ಇಂತಹ ಒಬ್ಬ ಬಡವರ ಬಾಯಾಗಿದ್ದಂಥ ಧ್ವನಿಯಾಗಿದ್ದಂಥ ರಮೇಶ್ ಅವರು ಇನ್ನಿಲ್ಲ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನಾನು ಸಂತಾಪವನ್ನು ಸೂಚಿಸಲು ಬಯಸುತ್ತೇನೆ.

ಅಧ್ಯಕ್ಷರು: ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಸದಸ್ಯರು ಒಂದು ನಿಮಿಷ ಮೌನವನ್ನು ಆಚರಿಸಿದರು)

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರಿಂದ ರೂ. 150 ಕೋಟಿ ಸಂಗ್ರಹ ಮಾಡಿದ್ದಾರೆಂಬ ಹಗರಣಕ್ಕೆ ಸಂಬಂಧಪಟ್ಟಂತೆ

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಿಯಮಾವಳಿ ಪ್ರಕಾರ ನಾವು ನಿಲುವಳಿ ಸೂಚನೆ ಮುಂಜಾನೆ ಹತ್ತು ಗಂಟೆಯೊಳಗೆ ತಮ್ಮ ಕಾರ್ಯಾಲಯಕ್ಕೆ ಕಳುಹಿಸಬೇಕಿತ್ತು. ಈಗಾಗಲೇ ಬಹಳಷ್ಟು ವಿರೋಧಪಕ್ಷದ ನಾಯಕರು ಪ್ರಸ್ತಾಪವನ್ನು ಮಾಡಿದ್ದಾರೆ. 11 ಗಂಟೆಗೆ ಕರೆದಂಥ ಸಭೆಗೆ ತಾವು 12–30 ಗಂಟೆಗೆ ಬಂದಿದ್ದೀರಿ. ತಾವೇನು ಹೇಳಿದ್ದೀರಿ, ದೂದ್ಯನಾಯ್ಕ ಮತ್ತು ರಮೇಶ್‌ರವರ ನಿಧನದ ಬಗ್ಗೆ ನಾವು ಸಂತಾಪ ಸೂಚನೆಯನ್ನು ತರುತ್ತಿದ್ದೇವೆ, ಎನ್ನುವ ಮಾತನ್ನು ಹೇಳಿದಾಗ ನಾವು ಅದನ್ನು ಒಪ್ಪಿದ್ದೇವೆ. ಈಗ ನಿಲುವಳಿ